ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 8 ಸಂಚಿಕೆ 6 ಜೂನ್ 2023



ಪರಮಪೂಜ್ಯ ಜಗದ್ಗುರುಗಳವರು ಮಾರಿಷಸ್‌ನ ಅಧ್ಯಕ್ಷರಾದ ಘನತೆವೆತ್ತ ಶ್ರೀ ಪೃಥ್ವಿರಾಜ್ ಸಿಂಗ್ ರೂಪನ್‌ರವರನ್ನು ಗೌರವಿಸಿ ಅಭಿನಂದಿಸುತ್ತಿರುವುದು. ಶ್ರೀ ಎಸ್.ಪಿ. ಮಂಜುನಾಥ್, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಪ್ರವೀಣ್ ಮೊಹದೇಬ್ ಹಾಗೂ ಶ್ರೀ ಎಸ್. ಪುಟ್ಟಸುಬ್ಬಪ್ಪರವರುಗಳಿದ್ದಾರೆ (2 ಮೇ 2023)



ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ಸಚಿವರಾದ ಶ್ರೀ ಎಂ.ಬಿ. ಪಾಟೀಲ್‌ರವರು ಮತ್ತು ಅವರ ಧರ್ಮಪತ್ನಿ ಶ್ರೀಮತಿ ಆಶಾ ಪಾಟೀಲ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (22 ಮೇ 2023)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಎರಡು ದಿನಗಳ ಕಾರ್ಯಗಾರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಿವೃತ್ತ ಐ.ಎ.ಎಸ್ ಅಧಿಕಾರಿಗಳು ಹಾಗೂ ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಸುಶೀಲ ಸೋಮಶೇಖರ್, ಶ್ರೀ ಮ.ಗು. ಸದಾನಂದಯ್ಯ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಅಪ್ಪಾರಾವ್ ಅಕ್ಕೋಣೆಯವರು ಹಾಗೂ ಶ್ರೀಮತಿ ಸರ್ವಮಂಗಳಾ ಸೋಮಶೇಖರ್‌ರವರುಗಳಿದ್ದಾರೆ (27 ಮೇ 2023)

# ಧನಾತ್ಮಕ ಆಲೋಚನೆಯಿಂದ ಒತ್ತಡ ನಿರ್ವಹಣೆ ಸಾಧ್ಯ



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್ಎಸ್ ಮಹಾವಿದ್ಯಾಪೀಠದ ವತಿಯಿಂದ ವೈದ್ಯಕೀಯ ಮತ್ತು ದಂತವೈದ್ಯಕೀಯ ಕಾಲೇಜುಗಳ ಹೌಸ್ ಸರ್ಜನ್‌ಗಳಿಗಾಗಿ ಆಯೋಜಿಸಿದ್ದ ಶಿಬಿರದಲ್ಲಿ ಶಿಬಿರಾರ್ಥಿಗಳೊಂದಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ನಿರಂಜನ ವಾನಳ್ಳಿ, ಪ್ರಾಂಶುಪಾಲರಾದ ಡಾ. ಬಸವನಗೌಡಪ್ಪ ಹಾಗೂ ಶಿಬಿರದ ಸಂಚಾಲಕರುಗಳಿದ್ದಾರೆ.

ಧನಾತ್ಮಕ ಆಲೋಚನೆಯಿಂದ ಜೀವನದ ಒತ್ತಡ ನಿರ್ವಹಣೆ ಸಾಧ್ಯ ಎಂದು ಕೊಯಮತ್ತೂರಿನ ಗಂಗಾ ಆಸ್ಪತ್ರೆಯ ಅರಿವಳಿಕೆ ವಿಭಾಗದ ಮುಖ್ಯಸ್ಥರಾದ ಡಾ. ಬಾಲವೆಂಕಟ ಸುಬ್ರಹ್ಮಣಿಯನ್ ತಿಳಿಸಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 1 ಮತ್ತು 2 ರಂದು ವೈದ್ಯಕೀಯ ಮತ್ತು ದಂತವೈದ್ಯರಿಗಾಗಿ ಆಯೋಜಿಸಿದ್ದ ಶಿಬಿರದಲ್ಲಿ 'ಒತ್ತಡ ನಿರ್ವಹಣೆ' ವಿಷಯ ಕುರಿತು ಮಾತನಾಡುತ್ತಾ, ಒತ್ತಡದಿಂದ ಎಷ್ಟೋ ಜನರು ತಮ್ಮ ಜೀವನವನ್ನೇ ಕಳೆದುಕೊಂಡಿದ್ದಾರೆ. ಸ್ವಯಂ ಶಿಸ್ತು, ಸ್ವಯಂ ಸಂಪೂರ್ಣ ನಂಬಿಕೆ, ಉತ್ತಮ ಯೋಜನೆ, ಆತ್ಮವಿಶ್ವಾಸ, ಉತ್ತಮ ನಿದ್ರೆ, ಉತ್ತಮ ಜ್ಞಾನ ಮತ್ತು ಕೌಶಲ್ಯದ ಅಳವಡಿಕೆಯಿಂದ ಒತ್ತಡವನ್ನು ನಿರ್ವಹಣೆ ಮಾಡಬಹುದು. ದೇಶದಲ್ಲಿನ ಪ್ರತಿಯೊಬ್ಬ ವ್ಯಕ್ತಿಯು ತನ್ನಲ್ಲಿ ಪ್ರಬುದ್ಧತೆಯನ್ನು ಬೆಳೆಸಿಕೊಂಡರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ, ಹಾಗಾಗಿ ವ್ಯಕ್ತಿಯು ಮಾನಸಿಕವಾಗಿ, ಭಾವನಾತ್ಮಕವಾಗಿ, ದೈಹಿಕವಾಗಿ ಒತ್ತಡರಹಿತನಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿಯ ಯಶಸ್ಸಿನ ಗುಟ್ಟು, ಪ್ರತಿದಿನ ಅವನು ಬೆಳಗ್ಗೆ ಒಂದು ಗಂಟೆ ಯೋಜಿಸುವ ಕಾರ್ಯದಲ್ಲಿ ಅಡಗಿರುತ್ತದೆ, ಪ್ರತಿದಿನವು ಮನುಷ್ಯನಿಗೆ ಒಂದು ವರವಾಗಿದ್ದು, ಅದನ್ನು ಧನಾತ್ಮಕ ಆಲೋಚನೆಯೊಂದಿಗೆ ಒತ್ತಡ ರಹಿತವಾಗಿ ಕಳೆಯಬೇಕು ಎಂದು ಅಭಿಪ್ರಾಯಪಟ್ಟರು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ನಿರಂಜನ ವಾನಳ್ಳಿರವರು ಧನಾತ್ಮಕ ಚಿಂತನೆ ಎಂಬ ವಿಷಯ ಕುರಿತು ಉಪನ್ಯಾಸ ನೀಡಿ, ಜೀವನವು ನಮ್ಮ ನಂಬಿಕೆಗಳ ಮೇಲೆ ನಿಂತಿದೆ, ವೈದ್ಯ ಮತ್ತು ರೋಗಿಯ ನಡುವೆ ಧನಾತ್ಮಕ ನಂಬಿಕೆ ಇರಬೇಕು, ಅಪನಂಬಿಕೆಗಳಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ, ಜೀವನದಲ್ಲಿ ಎಷ್ಟೇ ಸಮಸ್ಯೆಗಳಿದ್ದರೂ ಸಂತೋಷವಾಗಿರಬೇಕು, ಏಕೆಂದರೆ ಪ್ರತಿಯೊಂದು ಸೋಲಿನಲ್ಲೂ ಗೆಲುವಿನ ಅವಕಾಶವಿರುತ್ತದೆ ಹಾಗೂ ದೃಷ್ಟಿಯಂತೆ ಸೃಷ್ಟಿ ಎನ್ನುವಂತೆ ಪ್ರತಿದಿನವೂ ಒಳ್ಳೆ ಕೆಲಸಗಳ ಬಗ್ಗೆ ಆಲೋಚಿಸಬೇಕು. ಜೀವನದಲ್ಲಿ ಎಲ್ಲಾ ಬಾಗಿಲುಗಳು ಮುಚ್ಚಿದಾಗ ಬಾಗಿಲು ತೆರೆಯಲು ಭಗವಂತನಿರುತ್ತಾನೆ, ಎಂಬ ನಂಬಿಕೆ ಇರಬೇಕು ಎಂದು ತಿಳಿಸಿದರು.

# ಆತ್ಮಪ್ರಜ್ಞೆಯು ಮನಸ್ಸು ಮತ್ತು ದೇಹಶಕ್ತಿಯನ್ನು ಮೀರಿದೆ



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ವೈದ್ಯಕೀಯ ಮತ್ತು ದಂತವೈದ್ಯರಿಗಾಗಿ ಆಯೋಜಿಸಿದ್ದ ಶಿಬಿರವನ್ನು ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿಯ ನರರೋಗ ವಿಭಾಗದ ಮುಖ್ಯಸ್ಥರಾದ ಡಾ.ಸಿ. ಕೋಮಲ್ ಪ್ರಸಾದ್ ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶಿಬಿರದ ಸಂಚಾಲಕರು ಹಾಗೂ ವಿದ್ಯಾರ್ಥಿಗಳನ್ನು ಕಾಣಬಹುದು.

ಆತ್ಮಪ್ರಜ್ಞೆ ಮನಸ್ಸು ಮತ್ತು ದೇಹಶಕ್ತಿಯನ್ನು ಮೀರಿದೆ ಎಂದು ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿಯ ನರರೋಗ ವಿಭಾಗದ ಮುಖ್ಯಸ್ಥರಾದ ಡಾ. ಸಿ. ಕೋಮಲ್ ಪ್ರಸಾದ್‌ರವರು ತಿಳಿಸಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 1 ಮತ್ತು 2 ರಂದು ವೈದ್ಯಕೀಯ ಮತ್ತು ದಂತವೈದ್ಯರಿಗಾಗಿ ಆಯೋಜಿಸಿದ್ದ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ, 'ಆಧ್ಯಾತ್ಮಿಕತೆ ಮತ್ತು ವಿಜ್ಞಾನ' ಎಂಬ ವಿಷಯದ ಕುರಿತು ಮಾತನಾಡುತ್ತಾ, ನಮ್ಮ ಜೀವನದ ಅನುಭವಗಳನ್ನು ನಮಗೆ ಪ್ರಸ್ತುತ ಪಡಿಸುವುದು ನಮ್ಮ ಮೆದುಳು, ಪಂಚೇಂದ್ರಿಯಗಳ ಮೂಲಕ ನಮಗೆ ಸ್ಪರ್ಶ, ರುಚಿ, ದೃಶ್ಯ, ಶ್ರವ್ಯ ಅನುಭವ ಉಂಟಾಗುತ್ತದೆ. ಆದರೆ ಮೆದುಳು ಕೆಲವು ಬಾರಿ ನಮ್ಮ ನಿಯಂತ್ರಣದಲ್ಲಿ ಹಾಗೂ ಕೆಲವು ವೇಳೆ ನಮ್ಮ ನಿಯಂತ್ರಣ ಮೀರಿ ವರ್ತಿಸುತ್ತದೆ, ಆದರೆ ನಮ್ಮಲ್ಲಿ ಒಬ್ಬ ಅಂತರಂಗದ ವೀಕ್ಷಣಾಗಾರನಿರುತ್ತಾನೆ, ಅವನು ನಮ್ಮ ಮನಸ್ಸು ಹಾಗೂ ದೇಹಶಕ್ತಿಯನ್ನು ಮೀರಿ ನಮ್ಮನ್ನು ಮುನ್ನಡೆಸುತ್ತಾನೆ, ಅದುವೇ ನಮ್ಮ ಆತ್ಮಪ್ರಜ್ಞೆ ಅಥವಾ ಅರಿವು. ದೇಹ ಮತ್ತು ಮನಸ್ಸು ನಾವು ಚಲಿಸುವ ಒಂದು ವಾಹನವಾದರೆ ನಮ್ಮನ್ನು ಸರಿ ಮಾರ್ಗದಲ್ಲಿ ಕರೆದೊಯ್ಯುವ ಚಾಲಕ ನಮ್ಮ ಆತ್ಮಪ್ರಜ್ಞೆಯಾಗಿರುತ್ತದೆ. ಪ್ರಜ್ಞೆ ಎನ್ನುವುದು ನಮ್ಮ ದೇಹದ ಭಾಗವೂ ಅಲ್ಲ ಉತ್ಪಾದನೆಯೂ ಅಲ್ಲ ಒಂದು ಸ್ವತಂತ್ರ ಘಟಕ, ಅದುವೇ ಆಧ್ಯಾತ್ಮ ಎಂದು ತಿಳಿಸಿದರು.

ಶಿವಮೊಗ್ಗದ ಅರಬಿಂದೋ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಜಿ.ಎಸ್. ನಟೇಶ್ 'ಭಾರತೀಯ ಸಂಸ್ಕೃತಿ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿ, ಭಾರತವು ತತ್ವಶಾಸ್ತ್ರ, ಇತಿಹಾಸ, ಭಾಷೆ, ವಿಜ್ಞಾನದ ತವರೂರು. ಇಲ್ಲಿಯ ಶ್ರೀಮಂತ ಸಂಸ್ಕೃತಿಯು ಪ್ರಪಂಚಕ್ಕೆ ಮಾದರಿಯಾಗಿದೆ. ಪ್ರಪಂಚದಲ್ಲಿ ಭೌತಿಕ ಮತ್ತು ಅಭೌತಿಕ ಎರಡು ಸಂಸ್ಕೃತಿಗಳಿದ್ದು, ಪ್ರಸ್ತುತ ದಿನಮಾನಗಳಲ್ಲಿ ಅಭೌತಿಕ ಸಂಸ್ಕೃತಿಯು ವೇಗವಾಗಿ ಚಲಿಸುತ್ತಿದೆ. ಒಂದು ಸ್ವಾಸ್ಥ್ಯ ಸಮಾಜವನ್ನು ನಿರೀಕ್ಷಿಸಬೇಕಾದರೆ ಈ ಎರಡೂ ಸಂಸ್ಕೃತಿಗಳು ಒಂದೇ ವೇಗದಲ್ಲಿ ಚಲಿಸಬೇಕು. ಹಾಗಾಗಿ ಭಾರತೀಯರು ಅಭೌತಿಕ ಸಂಸ್ಕೃತಿಯ ಬೆಳವಣಿಗೆಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ನಾವು ಸತ್ಯ, ಧರ್ಮ, ಪರೋಪಕಾರ, ಸಹೋದರತ್ವ ಮುಂತಾದ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ನಮ್ಮ ಬುದ್ಧಿಶಕ್ತಿಯಿಂದ ಧರ್ಮವನ್ನು ಪಾಲಿಸಬೇಕು. ಆತ್ಮಶುದ್ಧೀಕರಣದಿಂದ ಜೀವನವನ್ನು ನಡೆಸಬೇಕು ಹಾಗೂ ಭಾರತೀಯ ಸಂಸ್ಕೃತಿಯನ್ನು ಭಾರತೀಯ ಭಾಷೆಗಳ ಮೂಲಕವೇ ಅರಿಯುವುದು ಒಳಿತು ಎಂದು ಅಭಿಪ್ರಾಯಪಟ್ಟರು.

## ಸೈಬರ್ ಅಪರಾಧಗಳ ಬಗ್ಗೆ ಜನರಲ್ಲಿ ಅರಿವು ಮೂಡಬೇಕಾಗಿದೆ

ಆಧುನಿಕ ಕಾಲದಲ್ಲಿ ಮನುಷ್ಯ ಹೊಸ ಹೊಸ ಆವಿಷ್ಕಾರಗಳನ್ನು ಕಂಡುಕೊಳ್ಳುತ್ತಿದ್ದಾನೆ. ಇದರ ಜೊತೆಯಲ್ಲಿ ಸೈಬರ್ ಅಪರಾಧಗಳೂ ಹೆಚ್ಚುತ್ತಿವೆ ಎಂದು ನಿವೃತ್ತ ಪೊಲೀಸ್ ಅಧಿಕಾರಿ ಡಾ. ಡಿ.ವಿ. ಗುರುಪ್ರಸಾದ್‌ರವರು ಹೇಳಿದರು.

ಬಿಳಿಗಿರಿರಂಗನ ಬೆಟ್ಟದ ಜೆಎಸ್‌ಎಸ್ ಆಶ್ರಮದ ಆವರಣದಲ್ಲಿ ನಡೆದ ಜೀವನೋತ್ಸಾಹ ಶಿಬಿರದಲ್ಲಿ 'ಸೈಬರ್ ಜಾಗೃತಿ' ವಿಷಯ ಕುರಿತು ಮಾತನಾಡಿದ ಅವರು ವಿಜ್ಞಾನದಿಂದ ವಿಕಾಸವಾದಂತೆ ವಿನಾಶವೂ ಆಗುತ್ತದೆ. ಇಂದಿನ ಜಗತ್ತು ಆನ್‌ಲೈನ್ ಯುಗವಾಗಿದೆ. ಅಷ್ಟೇ ಅಲ್ಲ, ನಮ್ಮ ಅಂತರ್ಜಾಲವೆಂಬುದು ಬದುಕಿನ ಭಾಗವೇ ಆಗಿಹೋಗಿದೆ. ಈ ಹಿನ್ನೆಲೆಯಿಂದ ಸಾರ್ವಜನಿಕರು ಮೊಬೈಲ್‌ಗಳನ್ನು ಅತ್ಯಂತ ಜಾಗರೂಕತೆಯಿಂದ ಬಳಸಬೇಕು. ಆಗ ಮಾತ್ರ ಮೋಸಹೋಗುವ ಜನರ ಸಂಖ್ಯೆ ಕಡಮೆಯಾಗಬಹುದು. ಇಂದು ಅಪರಾಧಗಳು ನಡೆಯುತ್ತಿರುವ ರೀತಿಯನ್ನು ನೋಡಿದರೆ ಸಾಮಾನ್ಯ ಜನತೆ ದಿಗ್ಭ್ರಾಂತರಾಗುತ್ತಾರೆ. ಅಂತಹ ವಿಕೃತ ಮನಸ್ಥಿತಿಯ ಅಪರಾಧಿಗಳು ನಮ್ಮ ನಡುವೆಯೂ ಇದ್ದಾರೆ. ಅವರನ್ನು ಕಂಡುಹಿಡಿಯುವುದೇ ಕಷ್ಟವಾಗಿದೆ. ಮೋಸಹೋಗುವ ಜನರು ಇರುವವರೆಗೆ ಮೋಸ ಮಾಡುವವರು ಇರುತ್ತಾರೆ. ಹಾಗಾಗಿ ಎಚ್ಚರಿಕೆಯೇ ನಮ್ಮ ರಕ್ಷಕ ಎಂದು ತಿಳಿಸಿದರು.

ತುಮಕೂರಿನ ಶ್ರೀ ಸಿ.ಸಿ. ಪಾವಟೆಯವರು 'ದೇಹ ಮತ್ತು ಮನಸ್ಸು' ಎಂಬ ವಿಷಯ ಕುರಿತು ಮಾತನಾಡಿ ನಮ್ಮ ಆಲೋಚನೆ ಮತ್ತು ಅಭಿರುಚಿಯಂತೆ ಬದುಕು ನಿರ್ಮಾಣವಾಗುತ್ತದೆ. ಉತ್ತಮ ಆಲೋಚನೆ ಮಾಡುವುದರ ಮೂಲಕ ದೇಹ ಮತ್ತು ಮನಸ್ಸನ್ನು ಆರೋಗ್ಯಪೂರ್ಣವಾಗಿ ಇಟ್ಟುಕೊಳ್ಳಬೇಕು. ನಾವು ನಮ್ಮ ಮಕ್ಕಳ ಎದುರು ಮಾದರಿಯಾಗಿ ವ್ಯವಹರಿಸಬೇಕು, ಇಲ್ಲದಿದ್ದರೆ ಅವರ ಮನಸ್ಸಿನಲ್ಲಿ ಕೆಟ್ಟ ಭಾವಗಳು ಮೂಡಿ ಅವರು ಕೆಟ್ಟುಹೋಗುವ ಸಾಧ್ಯತೆ ಇರುತ್ತದೆ. ನಮ್ಮ ಪ್ರಗತಿಗೆ ಯಾವುದು ಪ್ರಯೋಜನವಾಗುತ್ತದೆ, ಅದರ ಕಡೆ ಗಮನ ಹರಿಸಬೇಕು. ಕೆಟ್ಟದ್ದು ಮನಸ್ಸಿನ ಆಳಕ್ಕೆ ಹೋಗದಂತೆ ಬದುಕು ನಡೆಸಬೇಕು. ಮನಸ್ಸಿನ ನಿರಾಳತೆಯೇ ಜೀವನೋತ್ಸಾಹ ಎಂದು ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಶಿಬಿರದ ಸಂಚಾಲಕರಾದ ಶ್ರೀ ಮಲ್ಲೇಶ್‌ರವರು ಐದು ದಿನಗಳು ನಡೆದ ಶಿಬಿರದ ವರದಿಯನ್ನು ಮಂಡಿಸಿದರು. ಶಿಬಿರಾರ್ಥಿಗಳು ಅವರ ಅನುಭವಗಳನ್ನು ಹಂಚಿಕೊಂಡರು. ಸಂಚಾಲಕರಾದ ಶ್ರೀ ಎಸ್. ಪುಟ್ಟರಾಜಪ್ಪನವರು ಎಲ್ಲರಿಗೂ ವಂದಿಸಿದರು.

□

## ಹವ್ಯಾಸಗಳ ಗುಚ್ಛವೇ ವ್ಯಕ್ತಿತ್ವದ ರೂಪ

ಹವ್ಯಾಸಗಳ ಗುಚ್ಛವೇ ವ್ಯಕ್ತಿತ್ವದ ರೂಪ ಎಂದು ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಮಹಾಮೇಧಾನಂದರವರು ತಿಳಿಸಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 3 ರಿಂದ 5 ರವರೆಗೆ ಫಾರ್ಮಸಿ ಮತ್ತು ಲೈಫ್ ಸೈನ್ಸ್ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ, 'ಜೀವನದಲ್ಲಿ ಯಶಸ್ಸನ್ನು ಸಾಧಿಸುವುದು' ಎಂಬ ವಿಷಯ ಕುರಿತು ಮಾತನಾಡುತ್ತಾ, ಜೀವನದಲ್ಲಿ ವ್ಯಕ್ತಿಯು ಬಾಹ್ಯ ಹಾಗೂ ಆಂತರಿಕ ಎರಡು ಪ್ರಪಂಚದಲ್ಲಿ ಯಶಸ್ಸು ಸಾಧಿಸಬೇಕು. ಬಾಹ್ಯ ಪ್ರಪಂಚದಲ್ಲಿ ದ್ರವ್ಯಗಳಿಕೆ ಸಂತೋಷದಾಯಕವಾಗಿದ್ದರೆ ಆಂತರಿಕ ಜಗತ್ತಿನಲ್ಲಿ ಮೌಲ್ಯಯುತ ಬದುಕೆ ಸಂತೋಷದಾಯಕವಾಗಿರುತ್ತದೆ. ಹಾಗಾಗಿ ನಾವು ಉತ್ತಮ ಹವ್ಯಾಸಗಳ ಮೂಲಕ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಮನುಷ್ಯನ ಆಲೋಚನೆಗಳೇ ಅವನ ಕ್ರಿಯೆಗಳಾಗಿರುತ್ತವೆ. ಕ್ರಿಯೆಗಳ ಮೂಲಕ ಅವನು ಹವ್ಯಾಸಗಳನ್ನು ರೂಢಿಸಿಕೊಳ್ಳುತ್ತಾನೆ.



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಫಾರ್ಮಸಿ ಮತ್ತು ಲೈಫ್ ಸೈನ್ಸ್ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಶಿಬಿರವನ್ನು ಮೈಸೂರು ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಮಹಾಮೇದಾನಂದರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶಿಬಿರದ ಸಂಚಾಲಕರು ಹಾಗೂ ವಿದ್ಯಾರ್ಥಿಗಳನ್ನು ಕಾಣಬಹುದು.

ಹಾಗಾಗಿ ಸ್ವನಿಯಂತ್ರಣದ ಮೂಲಕ ನಮ್ಮ ಆಲೋಚನೆಗಳನ್ನು ನಿಯಂತ್ರಿಸಿ ಉತ್ತಮ ಹವ್ಯಾಸಗಳನ್ನು ರೂಪಿಸಿಕೊಳ್ಳಬೇಕು. ನಾವು ನಿರ್ವಹಿಸುವ ಕಾರ್ಯದಲ್ಲಿ ಜವಬ್ದಾರಿಯನ್ನು ತೆಗೆದುಕೊಂಡಾಗ ನಮ್ಮ ಆಂತರಿಕಶಕ್ತಿ ಮತ್ತು ಪ್ರತಿಭೆ ಎಚ್ಚರಗೊಳ್ಳುತ್ತದೆ. ಆದ್ದರಿಂದ ನಾವು ಶ್ರದ್ಧಾಭಾವದಿಂದ ಕಾರ್ಯನಿರ್ವಹಿಸಿದರೆ ಪ್ರಪಂಚವನ್ನು ಬದಲಿಸಬಹುದು. ಬಹುಜನ ಹಿತಾಯ, ಬಹುಜನ ಸುಖಾಯ ಎಂಬಂತೆ ನಾವು ಬಹುಜನರ ಸುಖಕ್ಕಾಗಿ ಕಾರ್ಯಮಾಡಬೇಕು ಎಂದು ತಿಳಿಸಿದರು.

ಸರಗೂರಿನ ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್‌ನ ಶ್ರೀ ಎಸ್. ಪ್ರವೀಣ್‌ಕುಮಾರ್‌ರವರು 'ಉದ್ದೇಶದೊಂದಿಗೆ ವೃತ್ತಿ ಜೀವನವನ್ನು ನಿರ್ಮಿಸುವುದು' ಎಂಬ ವಿಷಯ ಕುರಿತು ಉಪನ್ಯಾಸ ನೀಡಿ, ನಮ್ಮ ಗುರಿಗಳು ಇಡೀ ಪ್ರಪಂಚವನ್ನು ಬದಲಿಸುವುದರ ಕಡೆಗೆ ಇರದೆ, ಸಮಾಜಕ್ಕೆ ನಾವು ಏನು ಉತ್ತಮವಾದುದನ್ನು ನೀಡುತ್ತೇವೆ ಎನ್ನುವುದರ ಕಡೆಗೆ ಇರಬೇಕು. ನೀವು ಉತ್ತಮಗೊಂಡರೆ ಸಮಾಜವೇ ಉತ್ತಮಗೊಳ್ಳುವುದು. ಬದಲಾವಣೆ ನಿಮ್ಮಿಂದಲೇ ಪ್ರಾರಂಭವಾಗಬೇಕು. ಯಾವುದೇ ಕಾರ್ಯನಿರ್ವಹಿಸಿದರೂ ಎಷ್ಟು ಸಾಧ್ಯವೋ ಅಷ್ಟು ಉತ್ತಮವಾದುದನ್ನು ನೀಡಲು ಪ್ರಯತ್ನಿಸಿ ಎಂದು ತಿಳಿಸಿದರು.

ರಾಮನಗರದ ಶ್ರೀ ಪದ್ಮಾವತಿ ಆಯುಷ್ ಮೆದುಳು ಮತ್ತು ಬೆನ್ನುಮೂಳೆ ಪುನರ್‌ವಸತಿ ಸಂಸ್ಥೆಯ ಡಾ. ಅರುಣ್ ರಾಮನಗರರಂರವರು 'ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವ್ಯವಸ್ಥೆ' ಕುರಿತು ಉಪನ್ಯಾಸ ನೀಡಿ, ಮಾನವ ವಿಜ್ಞಾನದ ಸಹಾಯದಿಂದ ಜಗತ್ತಿನಲ್ಲಿ ಅದ್ಭುತವನ್ನು ಸಾಧಿಸಿದ್ದಾನೆ. ಆದರೆ ಅವನ ಜೀವಿತ ಅವಧಿಯಲ್ಲಿ ಅನೇಕ ದೈಹಿಕ ಮತ್ತು ಮಾನಸಿಕ ವ್ಯಾಧಿಗಳಿಂದ ಬಳಲುತ್ತಿದ್ದಾನೆ. ಇವುಗಳ ಪರಿಹಾರಕ್ಕೆ ಯೋಗವು ಪೂರಕವಾಗಿದೆ. ಯೋಗವು ನಮ್ಮ ಆತ್ಮವನ್ನು ಪರಮಾತ್ಮನ ಆತ್ಮದ ಜೊತೆ ಸೇರಿಸುವ ಪ್ರಕ್ರಿಯೆಯಾಗಿದೆ ಎಂದು ತಿಳಿಸಿ, ಅಷ್ಟಾಂಗ ಯೋಗಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳನ್ನು ಸವಿವರವಾಗಿ ವಿವರಿಸಿದರು.

# ಆರೋಗ್ಯ ಆಸ್ಪತ್ರೆಯಲ್ಲಿಲ್ಲ, ನಮ್ಮ ಅಡುಗೆ ಕೋಣೆಯಲ್ಲಿದೆ



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಫಾರ್ಮಸಿ ಮತ್ತು ಲೈಫ್ ಸೈನ್ಸ್ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಶಿಬಿರದಲ್ಲಿ ಶಿಬಿರಾರ್ಥಿಗಳೊಂದಿಗೆ, ವಯೊಲಿನ್ ವಾದಕರಾದ ಡಾ. ಮೈಸೂರು ಎಂ. ಮಂಜುನಾಥ್‌ರವರು ಹಾಗೂ ಶಿಬಿರದ ಸಂಚಾಲಕರುಗಳಿದ್ದಾರೆ.

ಆರೋಗ್ಯ ಆಸ್ಪತ್ರೆಯಲ್ಲಿಲ್ಲ, ನಮ್ಮ ಅಡುಗೆ ಕೋಣೆಯಲ್ಲಿದೆ ಎಂದು ಮೈಸೂರಿನ ಆಹಾರ ಮತ್ತು ಪೌಷ್ಟಿಕಾಂಶ ತಜ್ಞರಾದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಖಾದರ್ ವಲಿರವರು ತಿಳಿಸಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 3 ರಿಂದ 5 ರವರೆಗೆ ಫಾರ್ಮಸಿ ಮತ್ತು ಲೈಫ್ ಸೈನ್ಸ್ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಶಿಬಿರದಲ್ಲಿ 'ಜೀವನ ಕ್ರಮ ಮತ್ತು ಆರೋಗ್ಯ' ಎಂಬ ವಿಷಯದ ಕುರಿತು ಮಾತನಾಡುತ್ತಾ, ಆಹಾರ ಕ್ರಮ ಸರಿಯಾಗಿದ್ದರೆ ಯಾವುದೇ ಔಷಧದ ಅಗತ್ಯವಿಲ್ಲ. ದೇಶಿ ಆಹಾರ ಸೇವನೆಯಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಅತಿಯಾದ ಸಂಸ್ಕರಣೆಯಿಂದ ಆಹಾರವು ವಿಷವಾಗುತ್ತಿದೆ. ನಮ್ಮ ಯಾವುದೇ ಔಷಧಗಳು ರೋಗವನ್ನು ಸಂಪೂರ್ಣವಾಗಿ ಗುಣಪಡಿಸುವುದಿಲ್ಲ. ಇಂದು ನಾವು ವಿಜ್ಞಾನ ತಂತ್ರಜ್ಞಾನದ ಹೆಸರಿನಲ್ಲಿ ಹೆಚ್ಚು ಔಷಧಿಗಳ ಸೇವನೆಗೆ ಒಳಗಾಗಿದ್ದೇವೆ. ಹಾಗಾಗಿ ಆರೋಗ್ಯಕ್ಕೆ ಪೂರಕವಾದ ಸಿರಿಧಾನ್ಯಗಳ ಸೇವನೆಯಿಂದ ನಮ್ಮ ಮೃದು ಅಂಗಗಳನ್ನು ಸಂರಕ್ಷಿಸಿಕೊಳ್ಳಬಹುದಾಗಿದೆ. ಅತಿಯಾದ ನೀರಿನ ಬಳಕೆಯಲ್ಲಿ ಬೆಳೆಯುವ ಆಹಾರ ಪದಾರ್ಥಗಳು ನಮ್ಮ ಆರೋಗ್ಯಕ್ಕೆ ಅಷ್ಟು ಉಪಯುಕ್ತವಲ್ಲ ಎಂದು ಅಭಿಪ್ರಾಯಪಟ್ಟರು.

ವಯೊಲಿನ್ ವಾದಕರಾದ ಡಾ. ಮೈಸೂರು ಎಂ. ಮಂಜುನಾಥ್‌ರವರು 'ಭಾರತೀಯ ಶಾಸ್ತ್ರೀಯ ಸಂಗೀತದ ಮೂಲತತ್ವ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿ, ಸಂಗೀತ ಒಂದು ಭಾವಾನುಭಾವ ಮಾಧ್ಯಮ. ಹಾಗಾಗಿ ಸಂಗೀತ ಆಸ್ವಾದನೆ ಮಾಡುವುದಕ್ಕೆ ರಾಗ, ತಾಳ, ಶಾಸ್ತ್ರ ಜ್ಞಾನಗಳ ಅಗತ್ಯ ಇಲ್ಲ. ಇಡೀ ಪ್ರಕೃತಿಯಲ್ಲಿ ಸಂಗೀತ ಹರಡಿದೆ. ಪಕ್ಷಿಗಳ ಕಲರವದಿಂದ ಹಿಡಿದು, ತಾಯಿಯ ಜೋಗುಳದಲ್ಲಿಯೂ ಸಂಗೀತವಿದೆ. ಸಂಗೀತಕ್ಕೆ ಭಾಷೆಯ ಮಿತಿಯಿಲ್ಲ ಎಂದು ತಿಳಿಸಿದರು. ನಂತರ ಬೃಂದಾವನ ಸಾರಂಗ ರಾಗದಲ್ಲಿ ಆಲಾಪನೆ ಪ್ರಸ್ತುತ ಪಡಿಸಿದರು.

ಶಿಬಿರದಲ್ಲಿ ಊಟಿ ಮತ್ತು ಮೈಸೂರು ಫಾರ್ಮಸಿ ಕಾಲೇಜು ಹಾಗೂ ಲೈಫ್ ಸೈನ್ಸ್‌ನ 130 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ವೃತ್ತಿ ನಿರ್ವಹಣೆಯಲ್ಲಿ ದೂರದೃಷ್ಟಿ ಇರಬೇಕು



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ತಾಂತ್ರಿಕ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಶಿಬಿರವನ್ನು ನಿರ್ವಹಣಾ ಸಲಹೆಗಾರರಾದ ಶ್ರೀ ಹರೀಶ್ ಎಂ. ಕೊಡೆಂದರ್‌ರವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶಿಬಿರದ ಸಂಚಾಲಕರು ಹಾಗೂ ವಿದ್ಯಾರ್ಥಿಗಳನ್ನು ಕಾಣಬಹುದು.

ವೃತ್ತಿ ನಿರ್ವಹಣೆಯಲ್ಲಿ ದೂರದೃಷ್ಟಿ ಇರಬೇಕು ಎಂದು ನಿರ್ವಹಣಾ ಸಲಹೆಗಾರರಾದ ಶ್ರೀ ಹರೀಶ್ ಎಂ. ಕೊಡೆಂದರ್‌ರವರು ತಿಳಿಸಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 6 ರಿಂದ 8 ರವರೆಗೆ ತಾಂತ್ರಿಕ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ 'ವೃತ್ತಿ ಪ್ರಗತಿ' ಎಂಬ ವಿಷಯ ಕುರಿತು ಮಾತನಾಡುತ್ತಾ, ನಮ್ಮ ವೃತ್ತಿ ಜೀವನದಲ್ಲಿ ಅನೇಕ ಸವಾಲುಗಳಿವೆ, ಪ್ರತಿಭೆ ಮತ್ತು ಸಾಮರ್ಥ್ಯದಿಂದ ಅವುಗಳನ್ನು ಎದುರಿಸಬೇಕು. ಜೀವನದಲ್ಲಿ ನಮ್ಮ ಆಸಕ್ತಿ, ಸಾಮರ್ಥ್ಯಕ್ಕೆ ಅನುಗುಣವಾಗಿ ವೃತ್ತಿಯನ್ನು ಆರಿಸಿಕೊಳ್ಳಬೇಕು, ವೃತ್ತಿಯನ್ನು ನಿರ್ವಹಿಸಲು ವೃತ್ತಿ ಪ್ರೀತಿ, ತೊಡಗಿಸಿಕೊಳ್ಳುವಿಕೆ, ಅರ್ಪಣಾ ಮನೋಭಾವ ಅವಶ್ಯಕ. ಪ್ರಪಂಚದಲ್ಲಿ ವೃತ್ತಿಯು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸದಿಂದ ಕೂಡಿರುತ್ತದೆ. ಮುಂದಿನ ದಿನಗಳಲ್ಲಿ ಆಗುವ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಲು ನಾವು ಪ್ರವೃತ್ತರಾಗಬೇಕು. ಜೀವನದಲ್ಲಿ ನಾವು ಹೆಚ್ಚು ಸುರಕ್ಷಿತ ಎಂದು ಭಾವಿಸಬಾರದು, ಕೆಲವು ಅನಿವಾರ್ಯತೆಯಲ್ಲಿ ನಾವು ಕಾರ್ಯನಿರ್ವಹಿಸಬೇಕಾಗುತ್ತದೆ ಎಂದು ತಿಳಿಸಿದರು.

ಮೈಸೂರಿನ ಕಾರ್ಪೋರೇಟರ್ ಟ್ರೈನರ್ ಶ್ರುತಿಯವರು 'ಸಮಯ ಮತ್ತು ಮನೋಭಾವ' ಎಂಬ ವಿಷಯ ಕುರಿತು ಮಾತನಾಡಿ ನಮ್ಮ ಸಾಮರ್ಥ್ಯಗಳ ಬಗ್ಗೆ ನಮಗೆ ಅರಿವು ಇರಬೇಕು ಹಾಗೂ ಧನಾತ್ಮಕ ಮನೋಭಾವ ಇರಬೇಕು. ಭೂಮಿಯ ಮೇಲೆ ಅತ್ಯಂತ ಮೌಲ್ಯಯುತವಾದುದು ಸಮಯ. ಯಾರು ಸಮಯವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಾರೋ, ಅವರು ಜೀವನದಲ್ಲಿ ಯಶಸ್ಸು ಸಾಧಿಸುತ್ತಾರೆ ಎಂದರು.

ಮೈಸೂರಿನ ಚಾರ್ಟೆಡ್ ಅಕೌಂಟೆಂಟ್ ಶ್ರೀ ಎಂ.ಆರ್. ತೇಜಸ್ವಿಯವರು 'ಆರ್ಥಿಕ ಸಾಕ್ಷರತೆ' ಎಂಬ ವಿಷಯ ಕುರಿತು ಮಾತನಾಡುತ್ತಾ, ಹಣಕಾಸಿನ ವ್ಯವಹಾರ ಎಂಬುದು ಒಂದು ದಿನದ ಕ್ರಿಯೆಯಲ್ಲ. ಇದು ಜೀವನ ಪೂರ್ತಿ ನಮ್ಮೊಂದಿಗೆ ಇರುತ್ತದೆ. ಇಂದು ಭಾರತದ ಆರ್ಥಿಕ ಸಾಕ್ಷರತೆ ಪ್ರಮಾಣ ಶೇ.22 ರಷ್ಟು ಇದ್ದು, ಯೂರೋಪ್ ಮತ್ತು ಅಮೆರಿಕಾ ದೇಶಗಳಿಗೆ ಹೋಲಿಕೆ ಮಾಡಿದರೆ ತುಂಬಾ ಕಡಿಮೆ ಇದೆ. ಸಣ್ಣ ಸಣ್ಣ ಖರ್ಚುಗಳು ಸಹ ನಮ್ಮ ಆರ್ಥಿಕ ದುಸ್ಥಿತಿಗೆ ಕಾರಣವಾಗಬಹುದು. ಹಾಗಾಗಿ ಹಣಕಾಸಿನ ವ್ಯವಹಾರದಲ್ಲಿ ನಾವು ಶಿಸ್ತನ್ನು ಪಾಲಿಸಬೇಕು ಎಂದು ತಿಳಿಸಿದರು.

# ವಿನ್ಯಾಸ ಚಿಂತನೆಯು ಸಾಮರ್ಥ್ಯಗಳನ್ನು ಸ್ಪರ್ಶಿಸುತ್ತದೆ



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ತಾಂತ್ರಿಕ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಶಿಬಿರದಲ್ಲಿ ಇನ್ಫೋಸಿಸ್ ಲಿಮಿಟೆಡ್‌ನ ಡಾ. ಕೆ.ಎಸ್. ಸುಂದರ್‌ರವರು ಉಪನ್ಯಾಸ ನೀಡಿದರು. ಚಿತ್ರದಲ್ಲಿ ಶಿಬಿರಾರ್ಥಿಗಳನ್ನು ಕಾಣಬಹುದು.

ವಿನ್ಯಾಸ ಚಿಂತನೆಯು ಸಾಮರ್ಥ್ಯಗಳನ್ನು ಸ್ಪರ್ಶಿಸುತ್ತದೆ ಎಂದು ಇನ್ಫೋಸಿಸ್ ಲಿಮಿಟೆಡ್‌ನ ಡಾ. ಕೆ. ಎಸ್. ಸುಂದರ್‌ರವರು ತಿಳಿಸಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 6 ರಿಂದ 8 ರವರೆಗೆ ತಾಂತ್ರಿಕ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಶಿಬಿರದಲ್ಲಿ 'ವಿನ್ಯಾಸ ಚಿಂತನೆ' ವಿಷಯ ಕುರಿತು ಮಾತನಾಡುತ್ತಾ ವಿನ್ಯಾಸ ಚಿಂತನೆಯು ನಾವು ನಮ್ಮ ಕಾರ್ಯಕ್ಷೇತ್ರದಲ್ಲಿ ಯಾವ ರೀತಿ ಸೇವೆ ಒದಗಿಸುತ್ತೇವೆ ಎಂಬುದನ್ನು ತಿಳಿಸುತ್ತದೆ. ಸಮಸ್ಯೆಯನ್ನು ಪರಿಹರಿಸುವ ಮೊದಲು ಸಮಸ್ಯೆಯನ್ನು ಗುರುತಿಸುವುದನ್ನು ಕಲಿಯಬೇಕು. ನಾವು ಈಗ ಎಲ್ಲಿದ್ದೇವೆ, ನಮಗೆ ಯಾವ ದಾರಿಯ ಅವಶ್ಯಕತೆ ಇದೆ ಎನ್ನುವುದನ್ನು ಅರಿಯಬೇಕು. ನಮ್ಮ ಮುಂದೆ ಉದ್ಭವಿಸುವ ಸಮಸ್ಯೆಗಳನ್ನು ಸ್ಥಳೀಯವಾಗಿ ಮಾತ್ರ ನೋಡದೆ ಜಾಗತಿಕ ಮಟ್ಟದಲ್ಲಿ ನೋಡಿ ಪರಿಹರಿಸಬೇಕು. ವಿನ್ಯಾಸ ಚಿಂತನೆಯಲ್ಲಿ ಸಹಾನುಭೂತಿ, ಕಾರ್ಯಸಾಧ್ಯತೆಗಳು ತುಂಬಾ ಅವಶ್ಯಕವಾಗಿವೆ. ಬುದ್ಧಿಶಕ್ತಿಯು ಕೌಶಲಗಳಿಂದ ಕೂಡಿರಬೇಕು. ಜ್ಞಾನವನ್ನು ಅಳವಡಿಸಿಕೊಂಡು ಸಮಸ್ಯೆಗಳಿಗೆ ಪರಿಹಾರ ಹುಡುಕುವಲ್ಲಿ ಕೌಶಲವು ಸಹಾಯಕ್ಕೆ ಬರುತ್ತದೆ.

ಮನೋವೈಜ್ಞಾನಿಕ ಸಲಹೆಗಾರರಾದ ಡಾ. ಸುಜಾತಾ ಭಾಸ್ಕರರವರು 'ಒತ್ತಡ ನಿರ್ವಹಣೆ ಮತ್ತು ಯೋಗ' ಎಂಬ ವಿಷಯ ಕುರಿತು ಮಾತನಾಡಿ ಒತ್ತಡವು ನಮ್ಮ ಜೀವನದ ಒಂದು ಭಾಗವಲ್ಲ, ಅದು ವ್ಯವಸ್ಥೆಯನ್ನು ನಿರ್ವಹಿಸಲು ನಮ್ಮ ಅಸಮರ್ಥತೆಯಾಗಿದೆ. ಒತ್ತಡ ನಿರ್ವಹಣೆಯಲ್ಲಿ ಯೋಗವು ಪ್ರಮುಖ ಪಾತ್ರ ವಹಿಸುತ್ತದೆ. ನಮಗೆ ಭಯವಾದಾಗ, ಸವಾಲಿನ ಪರಿಸ್ಥಿತಿಯನ್ನು ಎದುರಿಸಲು ನಮ್ಮಲ್ಲಿ ಸಂಪನ್ಮೂಲಗಳು ಇಲ್ಲವೆಂದು ಭಾವಿಸಿದಾಗ ವ್ಯಕ್ತಿ ಒತ್ತಡಕ್ಕೆ ಒಳಗಾಗುತ್ತಾನೆ. ಇದು ದೀರ್ಘಕಾಲದ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಕೆಲಸದ ಗುಣಮಟ್ಟ ಮತ್ತು ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರಬಹುದಾಗಿದೆ. ಒತ್ತಡ ನಿರ್ವಹಿಸಲು ಉದ್ಯೋಗದ ವಿಶ್ಲೇಷಣೆ ನಡೆಸುವುದು ಹಾಗೂ ಪ್ರಮುಖ ಆದ್ಯತೆಗಳನ್ನು ಅಭ್ಯಾಸ ಮಾಡುವುದು, ಸಮಯ ನಿರ್ವಹಣೆ, ನಕಾರಾತ್ಮಕ ಚಿಂತನೆಯನ್ನು ಬಿಟ್ಟು ಧನಾತ್ಮಕ ಆಲೋಚನೆಯನ್ನು ವೃದ್ಧಿಸಿಕೊಳ್ಳಬೇಕು. ಅಗತ್ಯಕ್ಕೆ ತಕ್ಕಷ್ಟು ಯೋಗ, ವ್ಯಾಯಾಮ ಮತ್ತು ನಿದ್ರೆಯನ್ನು ಮಾಡಬೇಕು. ಒತ್ತಡವಿರುವಾಗ ಅಲ್ಪ ವಿಶ್ರಾಂತಿ ಪಡೆಯಬೇಕು ಎಂದರು.

# ಯಶಸ್ಸಿಗೆ ಧನಾತ್ಮಕ ಮನೋಧೋರಣೆ ಅಗತ್ಯ



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ತಾಂತ್ರಿಕ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಶಿಬಿರದಲ್ಲಿ ಶಿಬಿರಾರ್ಥಿಗಳೊಂದಿಗೆ, ರಾಯಲ್ ಮೈಸೂರ್ ವಾಕ್ ಟೂರ್‌ನ ನಾಯಕತ್ವ ಮತ್ತು ಅಭಿವೃದ್ಧಿ ಸಲಹೆಗಾರರಾದ ಶ್ರೀ ವಿನಯ್ ಪರಮಶಿವಪ್ಪರವರು ಹಾಗೂ ಶಿಬಿರದ ಸಂಚಾಲಕರುಗಳಿದ್ದಾರೆ.

ಯಶಸ್ಸಿಗೆ ಧನಾತ್ಮಕ ಮನೋಧೋರಣೆ ಅಗತ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಡಿ.ಎಸ್. ಗುರುರವರು ತಿಳಿಸಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 6 ರಿಂದ 8 ರವರೆಗೆ ತಾಂತ್ರಿಕ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಶಿಬಿರದಲ್ಲಿ 'ಅನಿಶ್ಚಿತತೆಯನ್ನು ಎದುರಿಸುವುದು' ಎಂಬ ವಿಷಯ ಕುರಿತು ಮಾತನಾಡುತ್ತಾ, ಜೀವನವು ನಿಶ್ಚಿತತೆ ಹಾಗೂ ಅನಿಶ್ಚಿತತೆಯ ಸರಣಿಯಾಗಿದ್ದು, ಅನಿಶ್ಚಿತತೆಯಿಂದ ನಮಗೆ ಭಯ, ಆತಂಕ, ಒತ್ತಡ ಮತ್ತು ಶಕ್ತಿಹೀನ ಮನೋಭಾವಗಳು ಉಂಟಾಗುತ್ತವೆ. ಆತ್ಮವಿಶ್ವಾಸ, ಜ್ಞಾನ ಮತ್ತು ಧನಾತ್ಮಕ ಮನೋಭಾವನೆಯಿಂದ ಅನಿಶ್ಚಿತತೆಯಿಂದ ಹೊರಬರಲು ಸಾಧ್ಯ. ಭ್ರಮೆಯಿಂದ ಜೀವನದಲ್ಲಿ ಹಲವು ಬಾರಿ ನಾವು ಸೋಲುತ್ತೇವೆ. ನಮ್ಮ ಜೀವನದ ಯಶಸ್ಸಿನ ಮಾರ್ಗವನ್ನು ನಾವೇ ಕಂಡುಕೊಳ್ಳಬೇಕು. ನಮ್ಮ ವ್ಯಕ್ತಿತ್ವ, ಸ್ವವಿಶ್ವಾಸ, ನಿಷ್ಠೆ ಹಾಗೂ ಅನುಭವಗಳ ಮೂಲಕ ನಮ್ಮ ಸಮಸ್ಯೆಗಳಿಂದ ಹೊರಬರಬೇಕು. ಭವಿಷ್ಯದ ಘಟನೆಗಳ ಬಗ್ಗೆ ಕಲ್ಪನೆಯೊಂದಿಗೆ ಜೀವಿಸಬೇಕು ಎಂದು ಅಭಿಪ್ರಾಯಪಟ್ಟರು.

ರಾಯಲ್ ಮೈಸೂರ್ ವಾಕ್ ಟೂರ್‌ನ ನಾಯಕತ್ವ ಮತ್ತು ಅಭಿವೃದ್ಧಿ ಸಲಹೆಗಾರರಾದ ಶ್ರೀ ವಿನಯ್ ಪರಮಶಿವಪ್ಪರವರು 'ಅನ್ವೇಷಿಸದ ಭಾರತ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿ, ನಮ್ಮ ಜನನವೇ ಒಂದು ಕುತೂಹಲಕಾರಿ, ಹಾಗಾಗಿ ಜೀವನದಲ್ಲಿ ನಾವು ಎಂದೂ ಕುತೂಹಲವನ್ನು ಕಳೆದುಕೊಳ್ಳಬಾರದು, ಪ್ರಪಂಚದಲ್ಲಿ ಇರುವ ಪ್ರತಿಯೊಂದು ವಿಷಯದ ಬಗ್ಗೆಯೂ ನಮಗೆ ಕುತೂಹಲವಿರಬೇಕು, ಭಾರತ ದೇಶವು ವೈವಿಧ್ಯಮಯ ಪರ್ವತ, ಮರುಭೂಮಿ, ಸಮುದ್ರ, ಮಹಾಸಾಗರಗಳಿಂದ ಕೂಡಿದ್ದು, ಇಲ್ಲಿನ ವೈವಿಧ್ಯತೆಗಳನ್ನು ನಾವು ಅನ್ವೇಷಿಸಬೇಕು. ಜೀವನದಲ್ಲಿ ಜ್ಞಾನ ಮತ್ತು ಕೌಶಲವನ್ನು ಸಂಪಾದಿಸಬೇಕಾದರೆ, ದೇಶ ಸುತ್ತು, ಕೋಶ ಓದು ಎನ್ನುವ ಗಾದೆಯಂತೆ ಪುಸ್ತಕ ಓದಬೇಕು, ವ್ಯಕ್ತಿಗಳೊಂದಿಗೆ ವಿಚಾರ ವಿನಿಮಯ ಮಾಡಬೇಕು ಹಾಗೂ ಪ್ರಪಂಚವನ್ನು ಸುತ್ತಬೇಕು. ಜೀವನ ಕೌಶಲಗಳನ್ನು ನಮಗೆ ಯಾರೂ ಬೋಧಿಸಲು ಸಾಧ್ಯವಿಲ್ಲ, ಮನೋಭಾವ ಹಾಗೂ ಅನುಭವದಿಂದ ಅವುಗಳನ್ನು ನಾವು ರೂಪಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

## ಲಿಂಗವು ಅಧ್ಯಾತ್ಮವೂ ಹೌದು, ವಿಜ್ಞಾನವೂ ಹೌದು



ಶ್ರೀ ಸುತ್ತೂರು ಕ್ಷೇತ್ರದಲ್ಲಿ ನಡೆದ ಅಧ್ಯಯನ ಶಿಬಿರದಲ್ಲಿ ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸಚಾರಿತ್ರ ಕೃತಿ ಕುರಿತು ಬೆಂಗಳೂರಿನ ಬಸವೇಶ್ವರ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ. ಶೀಲಾದೇವಿ ಎಸ್. ಮಳಿಮಠರವರು ಉಪನ್ಯಾಸ ನೀಡುತ್ತಿರುವುದು.

ಲಿಂಗವು ಅಧ್ಯಾತ್ಮವೂ ಹೌದು, ವಿಜ್ಞಾನವೂ ಹೌದು ಎಂದು ಬೆಂಗಳೂರಿನ ಬಸವೇಶ್ವರ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ. ಶೀಲಾದೇವಿ ಎಸ್. ಮಳಿಮಠರವರು ಹೇಳಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಲಿಂಗಲೀಲಾ ವಿಲಾಸ ಚಾರಿತ್ರ ಕೃತಿ ಕುರಿತು ನಡೆದ ಅಧ್ಯಯನ ಶಿಬಿರದಲ್ಲಿ ದಿನಾಂಕ 16.5.2023ರಂದು ಉಪನ್ಯಾಸ ನೀಡುತ್ತಾ ಅನುಭವದ ಪರಿಪಕ್ವತೆಯಿಂದ ಮನುಷ್ಯ ಪರಮಾನಂದವನ್ನು ಪಡೆಯುತ್ತಾನೆ. ಚೈತನ್ಯ ಜ್ಞಾನ ಸ್ವರೂಪವೇ ಅರಿವು. ಮನುಷ್ಯ ನಿಷ್ಕಲ್ಮಶ ಆನಂದದಲ್ಲಿ ತೃಪ್ತಿಪಟ್ಟು ಶಾಂತಿಯನ್ನು ಅನುಭವಿಸುತ್ತಾನೆ. ಚೈತನ್ಯ ಜ್ಞಾನ ಶೂನ್ಯವಾದ ವಸ್ತುವಲ್ಲ, ಅದು ಜ್ಞಾನ ವಸ್ತು. ಪರಿಪೂರ್ಣ ಚೈತನ್ಯಾತ್ಮಕತೆಯೇ ಶಿವ, ಶಿವನ ಸ್ವಯಂ ಪ್ರಕಾಶ ಸಾಮರ್ಥ್ಯ ಶಕ್ತಿಯೇ ಚಿಚ್ಛಕ್ತಿಯಾಗಿದೆ. ಅಖಂಡ ಚಿತ್ ಪ್ರಕಾಶ ತೇಜೋಮೂರ್ತಿಯಾದ ಮಹಾಲಿಂಗವು ಪಂಚ ಸಾದಖ್ಯಗಳಾದ ಶಿವ ಸಾದಖ್ಯ, ಅಮೂರ್ತ ಸಾದಖ್ಯ, ಮೂರ್ತ ಸಾದಖ್ಯ, ಕರ್ತೃ ಸಾದಖ್ಯ, ಕರ್ಮ ಸಾದಖ್ಯಗಳು ಈ ಜಗತ್ತಿನ ಸೃಷ್ಟಿಗೆ ಕಾರಕಗಳಾದವು. ಆತ್ಮನೆಂಬ ಅಂಗವು ತನ್ನನ್ನು ತಾನೇ ಅರ್ಜಿಸಿ ಪೂಜಿಸಿಕೊಂಡು ಲೀಲಾವಿಲಾಸದಿಂದ ಲಿಂಗಾಂಗ ಎರಡಾಯಿತ್ತು. ಶಿವನ ಅಂಶವಾದ ಆತ್ಮನು ಆ ಲಿಂಗಕ್ಕೆ ಅಂಗವಾಗುವುದೇ ಅಂಗಸ್ಥಲ ಎಂದು ತಿಳಿಸಿದರು.

ಬೆಂಗಳೂರಿನ ಎಸ್.ಜೆ.ಆರ್. ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರೇಮ ಸಿದ್ದರಾಜುರವರು ಎರಡನೇ ಅವಧಿಯಲ್ಲಿ ಉಪನ್ಯಾಸ ನೀಡುತ್ತಾ, ಸಂಸಾರದಿಂದ ಈ ಜಗತ್ತು ಸೃಷ್ಟಿಯಾಯಿತು. ಲಿಂಗದಿಂದ ಅಂಗವನ್ನು ಪಡೆದು ಅದರಿಂದ ಸ್ವರೂಪ ಹಾಗೂ ಜೀವವಾಗಿ, ಲೋಕ ಸುಖದೊಂದಿಗೆ ಬೆರೆತು, ಲಿಂಗವನ್ನು ಮರೆತು, ಮಾಡಬೇಕಾದ ಸಾಧನೆ ಮಾಡದೆ ಲೌಕಿಕ ಮಾಯೆಗೆ ಒಳಪಡುತ್ತೇವೆ. ನಾವು ಆಂತರಿಕವಾಗಿ ಪರಿಶುದ್ಧರಾಗಿರಬೇಕು. ಚಂದ್ರಕಾಂತದಲ್ಲಿ ಉದಕದಂತೆ, ಸೂರ್ಯಕಾಂತದಲ್ಲಿ ಅಗ್ನಿಯಂತೆ, ಬೀಜದಲ್ಲಿ ಅಂಕುರದಂತೆ ಆತ್ಮದಲ್ಲಿ ಶಿವನಿಹನು ಎಂದು ತಿಳಿಸಿದರು.

ಬೆಂಗಳೂರಿನ ಬಸವೇಶ್ವರ ಪ್ರಥಮ ದರ್ಜೆ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಸಿ. ಶಿವಕುಮಾರಸ್ವಾಮಿಯವರು ಮೂರನೇ ಅವಧಿಯ ಉಪನ್ಯಾಸ ನೀಡುತ್ತಾ, ಶಿವನ ಅಂಶವು ಆತ್ಮವಾಗಿದೆ. ಆತ್ಮದಲ್ಲಿ ರಜೋಗುಣ, ಸತ್ವಗುಣ ಹಾಗೂ ತಮೋಗುಣವನ್ನು ಕಾಣುತ್ತೇವೆ. ಆತ್ಮವು ದೇಹ ಸಂಬಂಧದಿಂದ ಜ್ಞಾನಿಯಾಗಿ ತನ್ನ ನಿಜವಾದ

ಶಿವತತ್ವವನ್ನು ಪಡೆಯುವುದಿಲ್ಲ. ಜ್ಞಾನವೆಂಬ ಗುರುವಿನ ಪೂಜೆ ಮಾಡಿ ಮತ್ತೊಂದನ್ನು ಬೇಡದೆ, ನಿಜವಾದ ಕೈಂಕರ್ಯದಿಂದ ಮಾಡಿದ ಕಾರ್ಯಕ್ಕೆ ಗುರು ಕರುಣಿಸಿ, ಅಜ್ಞಾನ ಅಳಿದು ಜ್ಞಾನವನ್ನು ಕರುಣಿಸುತ್ತಾನೆ. ಹಾಲೊಳಗೆ ತುಪ್ಪವು ಸಮವಾಗಿರುವಂತೆ ಪರಬ್ರಹ್ಮವು ಪಿಂಡದಲ್ಲಿ ಸಮರಸವಾಗಿರುತ್ತದೆ. ಜ್ಞಾನದಿಂದ ಆತ್ಮವು ತನ್ನ ಪೂರ್ವಾಪರ ಸಂಬಂಧವನ್ನು ವಿವೇಚಿಸಿ ಶಿವನೆಂದು ಅರಿಯುತ್ತದೆ ಎಂದು ತಿಳಿಸಿದರು.

## ಅಜ್ಞಾನವೆಂಬ ಕತ್ತಲೆ ಕಳೆಯುವ ಅಪೂರ್ವ ಬೆಳಕೆ ಗುರು



ಶ್ರೀ ಸುತ್ತೂರು ಕ್ಷೇತ್ರದಲ್ಲಿ ನಡೆಯುತ್ತಿರುವ ಅಧ್ಯಯನ ಶಿಬಿರದಲ್ಲಿ ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸಚಾರಿತ್ರ ಕೃತಿಯ ಕುರಿತು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ಜ್ಯೋತಿ ಶಂಕರ್‌ರವರು ಉಪನ್ಯಾಸ ನೀಡುತ್ತಿರುವುದು.

ಅಜ್ಞಾನವೆಂಬ ಕತ್ತಲೆ ಕಳೆಯುವ ಅಪೂರ್ವ ಬೆಳಕೆ ಗುರು ಎಂದು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ಜ್ಯೋತಿ ಶಂಕರ್‌ರವರು ಹೇಳಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 17 ರಂದು ನಡೆದ ಅಧ್ಯಯನ ಶಿಬಿರದಲ್ಲಿ ಉಪನ್ಯಾಸ ನೀಡುತ್ತಾ ಚೈತನ್ಯ ಸ್ವರೂಪನು, ನಿತ್ಯ ನಿರಂತರನು, ಶಾಂತ ಚಿತ್ತನು, ಆಕಾಶಾಧಿ ತತ್ವವನ್ನು ಮೀರಿದ ನಿರಂಜನ ಸ್ವರೂಪಿ, ನಾದಬಿಂದು ಕಳಾತೀತವಾದವನೇ ಗುರು. ಶಿಷ್ಯನ ಮಸ್ತಕದಲ್ಲಿ ತನ್ನ ಹಸ್ತಕಮಲವನ್ನು ಇರಿಸಿ ಪರಿಶುದ್ಧ ಭಾವವನ್ನು, ನಿರ್ಮಲ ಚಿತ್ತವನ್ನು, ಪ್ರತಿಷ್ಠೆ ಮಾಡುವವನು ಗುರು. ಆದಿಯಲ್ಲಿ ಗುರುವಿಗೆ ವಂದಿಸಿ, ನಂತರ ದೇವರನ್ನು ಪೂಜಿಸುವುದು ಭಾರತೀಯ ಸನಾತನ ಸಂಸ್ಕೃತಿ. ಮನುಷ್ಯನ ಭೌತಿಕ ಶರೀರಕ್ಕೆ ಸಂಸ್ಕಾರ ನೀಡಿ, ಸಮಾಜ ಜೀವಿ, ಭಾವ ಜೀವಿ, ಜ್ಞಾನ ಜೀವಿ, ಸಹಾಯ ಜೀವಿ, ಯೋಗ ಜೀವಿಯಾಗಿ ಪರಿವರ್ತಿಸುವಲ್ಲಿ ಗುರುವಿನ ಮಾರ್ಗದರ್ಶನ ಎಲ್ಲರ ಬದುಕಿಗೆ ದಾರಿದೀಪವಾಗುತ್ತದೆ. ಭವದಿಂದ ಗೆಲ್ಲಲು ಗುರುವಿನ ಉಪದೇಶ ಮಂತ್ರವೈದ್ಯನಂತೆ. ನರ ಜನ್ಮವ ತೊಡೆದು, ಹರ ಜನ್ಮವ ಮಾಡುವ ಗುರು. ಆಧ್ಯಾತ್ಮಿಕ ಆಸಕ್ತಿಗೆ ಗುರು ಕಾರಣನಾಗುತ್ತಾನೆ ಎಂದು ತಿಳಿಸಿದರು.

ಜೆಎಸ್‌ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಚಂದ್ರಶೇಖರಯ್ಯನವರು ಎರಡನೇ ಅವಧಿಯಲ್ಲಿ ಉಪನ್ಯಾಸ ನೀಡುತ್ತಾ, ಅಷ್ಟ ಮದಗಳನ್ನು ಕಳೆದು, ಅರಿಷಡ್ವರ್ಗಗಳನ್ನು ಗೆದ್ದು, ಸಪ್ತ ಧಾತುಗಳನ್ನು ನೀಗಿಕೊಂಡು ಸಾಧನೆ ಮಾಡಿದವನೇ ನಿಜವಾದ ಪ್ರಸಾದಿ. ವಾತ ಪಿತ್ತ ಶ್ಲೇಷವಳಿದು, ಆದಿ ವ್ಯಾಧಿಗಳನ್ನು ಕಳೆದುಕೊಂಡು ಅಜ್ಞಾನವನ್ನು ಬಿಟ್ಟು ಸುಜ್ಞಾನಿಯಾಗಬೇಕು. ಪ್ರಸಾದವೇ

ಗುರುಲಿಂಗ ಜಂಗಮವಾಗಿದೆ. ಪ್ರಸಾದವೇ ನಿತ್ಯ ಪರಿಪೂರ್ಣವಾಗಿದೆ. ಪ್ರಸನ್ನತೆಗೂ ಪ್ರಸಾದಕ್ಕೂ ಸಂಬಂಧವಿದೆ. ತನು ಮನ ಧನದಲ್ಲಿ ವಂಚನೆಯಿಲ್ಲದೆ ವಿಶ್ವಾಸದಿಂದ ಪ್ರಸಾದ ಪಡೆಯಬೇಕು. ಆಧ್ಯಾತ್ಮವನ್ನು ತಿಳಿದುಕೊಂಡು ಸತ್ಪುರುಷದಿಂದ ಶಿವಯೋಗದ ವಿಚಾರಗಳನ್ನು ತಿಳಿದುಕೊಳ್ಳಬೇಕು. ಸದ್ಭಕ್ತಿಯುಳ್ಳ ಮಹೇಶ್ವರನು ಸಾಧಕನಾಗಲು ಸಾಧ್ಯವಿದೆ, ತನುಸೋಂಕಿ ತನುನಷ್ಟವಾಗಿ ಮತ್ತೊಂದ ಮೆಟ್ಟಲೇರಬಲ್ಲಡೆ ಆತನೇ ಮಹೇಶ್ವರ ಎಂದು ತಿಳಿಸಿದರು.

ಮಹಾರಾಣಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ವಿ. ವಸಂತಕುಮಾರ್‌ರವರು ಮೂರನೇ ಅವಧಿಯ ಉಪನ್ಯಾಸ ನೀಡುತ್ತಾ, ಪ್ರಾಣಲಿಂಗದ ಅನುಭವಕ್ಕೆ ಭಯ ದುಃಖ, ಸುಖ ಭ್ರಂಯು ಸ್ಥಿತಿಯುಲಿದ್ದಾಗ ಸಚ್ಚಿದ್ದಾನಂದವಾಗುತ್ತದೆ. ಸಾವಿಲ್ಲದ ಸ್ಥಿತಿಯಲ್ಲಿ ಅನುಭಾವ ಭಕ್ತಿಯನ್ನು ಪಡೆಯಬೇಕು. ಸತ್ ಚಿತ್ ಆನಂದದ ಶುದ್ಧ ಪ್ರಜ್ಞೆ, ಏಕತೆ ಮತ್ತು ಅಂತಿಮ ವಾಸ್ತವಿಕತೆಯೇ ಆನಂದದಾಯಕ ಅನುಭವವಾಗಿದೆ. ಸರ್ವಕಾರಕನಾದ ಅಖಂಡ ಚಿತ್‌ಚೈತನ್ಯವೇ ಲಿಂಗ, ಚಿತ್ ಶಕ್ತಿಯೇ ಅಂಗ, ಚಿತ್ ಚೈತನ್ಯವೇ ತಾನು ಎಂದು ಅರಿಯಬೇಕು. ಕಣ್ಣಿನ ನೋಟ, ಮನಸ್ಸಿನ ನೋಟ ಒಂದೆಯಾದರೆ ಶರಣನಾಗುತ್ತಾನೆ. ಲಿಂಗ ಬೇರೆಯಲ್ಲ, ಸತ್ಯ ಬೇರೆಯಲ್ಲ ನಮಗೆ ದೇಹ ಸಂಸ್ಕಾರ ಅಷ್ಟೆ ಸಾಲದು, ಜೀವ ಸಂಸ್ಕಾರವೂ ಬೇಕು ಎಂದು ತಿಳಿಸಿದರು.

## ಅಹಂ ಪ್ರಜ್ಞೆ ಅಳಿದು ಹೃದಯ ವೈಶಾಲ್ಯತೆ ಬೆಳೆಯಲಿ

ನಾನು ಎಂಬ ಅಹಂ ಪ್ರಜ್ಞೆ ಅಳಿದು ನಾವು ಎಂಬ ಹೃದಯ ವೈಶಾಲ್ಯತೆಯನ್ನು ಬೆಳೆಸಿಕೊಳ್ಳಬೇಕು ಎಂದು ಪ್ರೊ. ಮೊರಬದ ಮಲ್ಲಿಕಾರ್ಜುನರವರು ಹೇಳಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 18 ರಂದು ಅಧ್ಯಯನ ಶಿಬಿರದಲ್ಲಿ ಉಪನ್ಯಾಸ ನೀಡಿದ ಅವರು ಅಂತರಂಗ ಬಹಿರಂಗವೆಂಬ ಬೇಧಗಳನ್ನು ಕಳೆದು ಭಿನ್ನತೆ ದೂರವಾದಾಗ ಐಕ್ಯತೆ ಲಭಿಸುತ್ತದೆ. ಮೊದಲು ದೇಹ ಅಂಗವಾಗಿರುತ್ತದೆ. ಐಕ್ಯಸ್ಥಿತಿ ತಲುಪಿದ ಮೇಲೆ ಆತ್ಮವೇ ಅಂಗವಾಗಿರುತ್ತದೆ. ಲಿಂಗೈಕ್ಯನು ಸುಪರಿಣಾಮ ಪ್ರಸಾದವ ಭೋಗಿಸಿ ಸುಖಿಸುತ್ತಾನೆ. ಗುರುವಿನ ಕುರುಹು ಕರಡು. ಗುರುಸ್ವರೂಪನಾಗಿ ಪರಮಾತ್ಮನಲ್ಲಿ ಐಕ್ಯಗೊಂಡಾಗ ಸಾಧಕ ದಿವ್ಯ ಜ್ಞಾನಿಯಾಗುತ್ತಾನೆ. ಶರಣರ ದೃಷ್ಟಿಯಲ್ಲಿ ಲಿಂಗೈಕ್ಯವೆಂದರೆ ಜೀವ ದೇವನಾಗಿ ಬೆಳೆವ ಸಂಭ್ರಮವಾಗಿದೆ. ಆತ್ಮ ಪರಮಾತ್ಮನಾಗುವುದು, ಅದು ನದಿ ನದಿಯಲ್ಲಿ ಬೆರೆತಂತೆ ನೈಸರ್ಗಿಕವಾಗಿದೆ. ಲಿಂಗದಲ್ಲಿ ಐಕ್ಯವಾಗಲು ಹಸಿವು, ತೃಷೆ, ವಿಷಯ, ವ್ಯಸನಗಳೊಂದಿಗೆ ಅರಿಷಡ್ವರ್ಗಗಳನ್ನು ತೊರೆಯಬೇಕು. ಬಯಲಿನಂತೆ ನಿರಾಕಾರವಾದ ಲಿಂಗಕ್ಕೆ ಇಷ್ಟಲಿಂಗದ ರೂಪ ಕೊಡುವವನು ಶರಣ. ಮೂಲ ಸ್ವರೂಪವಾದ ಬಯಲನ್ನು ಅನುಭವಿಸುವವನೇ ಲಿಂಗಾನುಭವಿ. ಗುರುಬೋಧೆಯಿಂದ ಅಂಗ ಲಿಂಗ ಒಂದೇ ಎಂದು ಅರಿತಾಗ ಲಿಂಗೈಕ್ಯವನ್ನು ಸಾಧಿಸುತ್ತಾನೆ. ಆತ್ಮವೇ ಜಂಗಮಲಿಂಗ, ತಾನು ಸ್ವೀಕರಿಸುವ ಪ್ರಸಾದವು ಪರವಸ್ತುವಿನ ರೂಪ ಎಂದು ಅರಿತು ಅವುಗಳ ಪ್ರಶಂಸೆಯನ್ನು ಬಿಟ್ಟು, ತನ್ನ ಕ್ರಿಯೆಗಳಲ್ಲಿ ಲಿಂಗದ ಕ್ರಿಯೆಗಳು ಎಂದು ತನ್ನನ್ನು ತಾನು ಅರ್ಚಿಸಿಕೊಳ್ಳುವುದು ಸ್ವಲೀಲಾನಂದಭಕ್ತಿಯಾಗಿದೆ ಎಂದು ತಿಳಿಸಿದರು.

ಹೊಸಪೇಟೆಯ ವಿಜಯನಗರ ಮಹಾವಿದ್ಯಾಲಯದ ಕನ್ನಡ ಸಹಪ್ರಾಧ್ಯಾಪಕರಾದ ಡಾ. ಮೃತ್ಯುಂಜಯ ರುಮಾಲೆರವರು ಉಪನ್ಯಾಸ ನೀಡುತ್ತಾ ವಚನಗಳು ಶರಣರ ಅನುಭಾವದ ದಿವ್ಯ ಬೆಳಕು, ಆ ಬೆಳಕಿನಿಂದ ಬದುಕಿನ ಕತ್ತಲೆ ಕಳೆದುಕೊಂಡು ಬೆಳಕನ್ನು ತುಂಬಲು ವಚನ ಸಾಹಿತ್ಯವು ಶಕ್ತವಾಗಿವೆ. ವಚನಗಳಲ್ಲಿ ಮನುಕುಲದ ಉನ್ನತಿಗೆ ಬೇಕಾದ ತತ್ವಸಿದ್ಧಾಂತಗಳಿವೆ. ನೊಂದವರಿಗೆ ಸಾಂತ್ವಾನದ ಸಂದೇಶವಿದೆ. ಜೀವನದ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಿದೆ. ಆತ್ಮೋದ್ಧಾರ ಮತ್ತು ಲೋಕೋದ್ಧಾರಕ್ಕೆ ಬೇಕಾದ ಎಲ್ಲಾ ತತ್ವಗಳಿವೆ. ಶಿವತತ್ವ ಅನುಷ್ಠಾನ ಉತ್ತಮ ಬದುಕಿಗೆ ಮಾರ್ಗಸೂತ್ರ. ಆಧ್ಯಾತ್ಮ ಬಹುದೊಡ್ಡ ಶಕ್ತಿ. ಆಧ್ಯಾತ್ಮಿಕ ಬದುಕನ್ನು ನಡೆಸುವವರ ಸಂಸಾರ ಎಂದೂ ಸೊರಗುವುದಿಲ್ಲ, ಸಂಸಾರಕ್ಕೆ ಎಷ್ಟೇ ಕಷ್ಟಗಳು ಎದುರಾದರೂ ಸುಖಮಯ ಜೀವನಕ್ಕೆ ಆಧ್ಯಾತ್ಮ ಸಹಕಾರಿಯಾಗಿರುತ್ತದೆ. ಗುರು ಲಿಂಗ ಜಂಗಮ ದಾಸೋಹವು ಸುಗಮವಾದರೆ ಕಾಯಕ ತತ್ವಗಳನ್ನು ಸಾಧಿಸಿದಂತಾಗುತ್ತದೆ ಎಂದು ತಿಳಿಸಿದರು.

# ಶ್ರೀ ಸುತ್ತೂರು ಕ್ಷೇತ್ರವು ಆಧ್ಯಾತ್ಮಿಕ ಸಂಪನ್ಮೂಲ ಕೇಂದ್ರ



ಶ್ರೀ ಸುತ್ತೂರು ಕ್ಷೇತ್ರದಲ್ಲಿ ನಡೆದ ಅಧ್ಯಯನ ಶಿಬಿರದಲ್ಲಿ ಹೊಸಪೇಟೆಯ ವಿಜಯನಗರ ಮಹಾವಿದ್ಯಾಲಯದ ಕನ್ನಡ ಸಹಪ್ರಾಧ್ಯಾಪಕರಾದ ಡಾ. ಮೃತ್ಯುಂಜಯ ರುಮಾಲೆಯವರು ಸಮಾರೋಪ ಭಾಷಣ ಮಾಡುತ್ತಿರುವುದು.

ಶ್ರೀ ಸುತ್ತೂರು ಕ್ಷೇತ್ರವು ಆಧ್ಯಾತ್ಮಿಕ ಸಂಪನ್ಮೂಲ ಕೇಂದ್ರವಾಗಿದೆ ಎಂದು ಹೊಸಪೇಟೆಯ ವಿಜಯನಗರ ಮಹಾವಿದ್ಯಾಲಯದ ಕನ್ನಡ ಸಹಪ್ರಾಧ್ಯಾಪಕರಾದ ಡಾ. ಮೃತ್ಯುಂಜಯ ರುಮಾಲೆಯವರು ಹೇಳಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಮಠಾಧಿಪತಿಗಳು, ಮಾತಾಜಿಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಹಾಗೂ ಸಾಧಕರುಗಳಿಗೆ ಮೇ 15 ರಿಂದ 19ರವರೆಗೆ ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರ ಕೃತಿಯ ಬಗೆಗೆ ಏರ್ಪಡಿಸಿದ್ದ ಅಧ್ಯಯನ ಶಿಬಿರದ ಸಮಾರೋಪ ಭಾಷಣ ಮಾಡುತ್ತಾ ಅವರು ತಿಳಿಸಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶ್ರೀ ಸುತ್ತೂರು ಕ್ಷೇತ್ರವು ಆಧ್ಯಾತ್ಮಿಕ ಹಾಗೂ ಶ್ರದ್ಧಾ ಸಂಪನ್ಮೂಲ ಕೇಂದ್ರವಾಗಿ ಬೆಳೆದಿದೆ. ದೂರದ ಅಮೆರಿಕಾದಲ್ಲಿಯೂ ಅಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದೆ. ಜಗತ್ತಿನಾದ್ಯಂತ ಜ್ಞಾನ, ಅಕ್ಷರ ಕ್ರಾಂತಿಯನ್ನುಂಟುಮಾಡಿದೆ. ಶ್ರೀಮಠವು ಸಾಮಾಜಿಕ ಸುಧಾರಣೆಗೆ ಮಹತ್ವದ ಕೊಡುಗೆಯನ್ನು ನೀಡುತ್ತಿದೆ, ಐದು ದಿನಗಳ ಕಾಲ ನಡೆದ ಅಧ್ಯಯನ ಶಿಬಿರದಲ್ಲಿ ಅತ್ಯಂತ ಜಟಿಲ ಕೃತಿಯಾದ ಲಿಂಗಲೀಲಾವಿಲಾಸ ಚಾರಿತ್ರವನ್ನು ಮನನ ಮಾಡಿಕೊಳ್ಳಲು ಸಾಧ್ಯವಾಯಿತು. ಧರ್ಮದ ಪ್ರಾಚೀನ ಕೃತಿಗಳ ಅಧ್ಯಯನ ಮಹತ್ವದ್ದಾಗಿದೆ. ಷಟ್‌ಸ್ಥಲ ಸಿದ್ಧಾಂತ ಅತ್ಯಂತ ಶ್ರೇಷ್ಠ ಸಿದ್ಧಾಂತವಾಗಿದ್ದು, ಅದನ್ನು ಅರ್ಥೈಸಿಕೊಳ್ಳುವುದು ಅವಶ್ಯವಾಗಿದೆ ಎಂದು ತಿಳಿಸಿದರು.

ಶಿಬಿರಾರ್ಥಿಗಳ ಪರವಾಗಿ ಮಹಾರಾಷ್ಟ್ರದ ಮಾತೆ ಮಹಾನಂದ ತಾಯಿ, ಧಾರವಾಡದ ಮಾತೆ ಅಕ್ಕ ನಾಗಲಾಂಬಿಕೆ, ಕೆಸವತ್ತೂರಿನ ಶ್ರೀ ಬಸವ ರಾಜೇಂದ್ರ ಸ್ವಾಮಿಗಳು, ರೇಚಂಬಳ್ಳಿಯ ಶ್ರೀ ಮಹದೇವಸ್ವಾಮಿಗಳು, ಗೋಕಾಕ್‌ನ ಶರಣ ಸೋಮಶೇಖರ ಬಸವರಾಜ ಮಗದುಮ್ಮರವರುಗಳು ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಈ ರೀತಿಯ ಶಾಸ್ತ್ರಗ್ರಂಥಗಳ ಅಧ್ಯಯನ ಸಾಧಕರುಗಳಿಗೆ ಅತ್ಯಂತ ಅನುಕೂಲವಾಗಿರುತ್ತದೆ. ಸಾಧನೆಯ ಮಾರ್ಗದಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿರುತ್ತದೆ ಎಂದರು.

ನವಿಲೂರು ಹಾಗೂ ಚುಂಚನಹಳ್ಳಿ ಮಠದ ಶ್ರೀ ಚನ್ನಬಸವಸ್ವಾಮಿಗಳವರು ಶಿಬಿರದ ವರದಿ ಮಂಡಿಸಿದರು. ಮಾತೆ ಶಿವದೇವಿ ತಾಯಿ ಸ್ವಾಗತಿಸಿದರು. ಡಾ. ಹೊನ್ನೇಗೌಡರವರು ವಂದಿಸಿದರು. ಕಾವ್ಯಶ್ರೀ ತಾಯಿಯವರು ಪ್ರಾರ್ಥನೆ ಸಲ್ಲಿಸಿದರು. ಶ್ರೀ ಎಸ್. ನಂದೀಶ್‌ರವರು ಕಾರ್ಯಕ್ರಮ ನಿರೂಪಿಸಿದರು.

## ಶರಣರ ಅಂತರಂಗದ ದಿವ್ಯವಾಣಿಯೇ ಜಗತ್ತಿನ ದಾರ್ಶನಿಕ ಸಾಹಿತ್ಯ

ಶರಣರ ಅಂತರಂಗದ ದಿವ್ಯವಾಣಿಯೇ ಜಗತ್ತಿನ ದಾರ್ಶನಿಕ ಸಾಹಿತ್ಯ ಎಂದು ನಿವೃತ್ತ ಐ.ಎ.ಎಸ್ ಅಧಿಕಾರಿಗಳು ಹಾಗೂ ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್‌ರವರು ಹೇಳಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 27 ಹಾಗೂ 28 ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಪದಾಧಿಕಾರಿಗಳಿಗೆ ಏರ್ಪಡಿಸಿದ್ದ ಕಾರ್ಯಾಗಾರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿದ ಅವರು 12ನೇ ಶತಮಾನದ ಕ್ರಾಂತಿಗೆ ಅಕ್ಷರ ಸ್ವರೂಪ ನೀಡಿದ್ದು ವಚನ ಸಾಹಿತ್ಯ. ಈ ಸಾಹಿತ್ಯವು ಶಬ್ದ ಚಮತ್ಕಾರದಿಂದ, ಪಾಂಡಿತ್ಯದಿಂದ ರಾಜಮಹಾರಾಜರಿಗಾಗಿ ಸೃಷ್ಟಿಯಾದ ಸಾಹಿತ್ಯವಲ್ಲ. ಸಾಮಾಜಿಕ ಬದ್ಧತೆ, ಸಾಮಾಜಿಕ ಕಳಕಳಿ, ಶೋಷಣೆ, ಮೂಢನಂಬಿಕೆಗಳ ವಿರುದ್ಧ ಹಾಗೂ ಸ್ತ್ರೀಯರಿಗೆ ಸಾಮಾಜಿಕ ಸ್ವಾತಂತ್ರ್ಯವನ್ನು ನೀಡಲು ಸೃಷ್ಟಿಯಾದ ಸಾಹಿತ್ಯ. ಇದು ಆತ್ಮಾವಲೋಕನ, ಆತ್ಮಕಲ್ಯಾಣ, ವಿಶ್ವಭ್ರಾತೃತ್ವಕ್ಕಾಗಿ ರಚಿತವಾಗಿದ್ದು ವಿಶ್ವ ಸಾಹಿತ್ಯದ ಕಿರೀಟವಾಗಿದೆ. ಶರಣ ತತ್ವಗಳ ಮೂಲ ಚಿಂತನೆ ಹಾಗೂ ಶರಣ ಸಾಹಿತ್ಯದ ಬಗ್ಗೆ ಅರಿವು ಇರಬೇಕು. ಶರಣ ತತ್ತ್ವಶಾಸ್ತ್ರದ ಬಗ್ಗೆ ತುಲನಾತ್ಮಕ ಸಂಶೋಧನೆಗಳು ನಡೆಯಬೇಕು, ಶರಣ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಹಾಗೂ ಜಿಲ್ಲಾ ಘಟಕಗಳು ಕ್ರಿಯಾಶೀಲವಾಗಬೇಕು, ಶಾಲಾ ಕಾಲೇಜುಗಳಲ್ಲಿ ದತ್ತಿ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳಲ್ಲಿ ಶರಣ ತತ್ತ್ವದ ಮಹತ್ವವನ್ನು ತಿಳಿಸುವ ಸತ್ಕಾರ್ಯವಾಗಬೇಕು ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಅಪ್ಪಾರಾವ್ ಅಕ್ಕೋಣಿಯವರು ಪರಿಷತ್ತಿನಲ್ಲಿ ಕಾರ್ಯ ನಿರ್ವಹಿಸುವುದು ಒಂದು ಪುಣ್ಯ, ಒಳ್ಳೆಯ ಕಾರ್ಯಕ್ರಮಗಳ ಸಂಯೋಜನೆಯೊಂದಿಗೆ ಪರಿಷತ್ತು ಮುನ್ನಡೆಯಬೇಕು. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಆಶೀರ್ವಾದ ಹಾಗೂ ಮಾರ್ಗದರ್ಶನದಿಂದ ಪರಿಷತ್ತು ರಾಷ್ಟ್ರದಾದ್ಯಂತ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು ಪೂಜ್ಯರು ನಾಡಿಗೆ, ದೇಶಕ್ಕೆ ಹಾಗೂ ವಿಶ್ವಕ್ಕೆ ಸ್ಫೂರ್ತಿಯಾಗಿದ್ದಾರೆ ಎಂದು ತಿಳಿಸಿದರು.

ಮೈಸೂರಿನ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮ.ಗು. ಸದಾನಂದಯ್ಯನವರು ಸ್ವಾಗತ ಕೋರಿದರು. ಕದಳಿ ಮಹಿಳಾ ವೇದಿಕೆಯ ರಾಜ್ಯ ಸಂಚಾಲಕರಾದ ಶ್ರೀಮತಿ ಸುಶೀಲ ಸೋಮಶೇಖರ್‌ರವರು ವಂದಿಸಿದರು. ಹಾಸನ ಜಿಲ್ಲಾ ಘಟಕದ ಉಪಾಧ್ಯಕ್ಷರಾದ ಶ್ರೀ ಕುಮಾರ್‌ರವರು ಪ್ರಾರ್ಥನೆ ಸಲ್ಲಿಸಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾದ ಶ್ರೀಶೈಲ ಪಟ್ಟಣಶೆಟ್ಟರವರು ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಗಾರದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಆಗಮಿಸಿರುವ 100 ಕ್ಕೂ ಹೆಚ್ಚು ಪರಿಷತ್ತಿನ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ
ನೆನಹಿಂಗೆ ಅರುಹಾಗಿ ಕಾಡಿತ್ತು ಮಾಯೆ
ಅರುಹಿಂಗೆ ಮರೆಹಾಗಿ ಕಾಡಿತ್ತು ಮಾಯೆ
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ
ಚನ್ನಮಲ್ಲಿಕಾರ್ಜುನಾ
ನೀನೊಡ್ಡಿದ ಮಾಯೆಯನಾರೂ ಗೆಲಬಾರದು

**ಅಕ್ಕಮಹಾದೇವಿ**

# ಸ್ವಚ್ಛವಾದ ಕೈ ಸ್ವಚ್ಛವಾದ ಆರೋಗ್ಯ



ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಸವಣ್ಣಗೌಡಪ್ಪನವರು ವಿಶ್ವ ಕೈ ನೈರ್ಮಲ್ಯದ ದಿನದ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು.

ವಿಶ್ವ ಕೈ ನೈರ್ಮಲ್ಯದ ದಿನದ ಅಂಗವಾಗಿ ಜೆಎಸ್‌ಎಸ್ ಆಸ್ಪತ್ರೆಯ ಸೋಂಕು ನಿವಾರಣೆ ಫಲಕ ವಿಭಾಗದಿಂದ ದಿನಾಂಕ 5.5.2023ರಂದು ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಸವಣ್ಣಗೌಡಪ್ಪ ಮಾತನಾಡುತ್ತಾ ಕೈ ನೈರ್ಮಲ್ಯ ದಿನದ ಇತಿಹಾಸ, ಉದ್ದೇಶಗಳು ಮತ್ತು ಆರೋಗ್ಯಕರವಾಗಿರಲು ಕೈ ಸ್ವಚ್ಛತೆಯ ಸಲಹೆಗಳನ್ನು ನೀಡಿದರು. ಕಾರ್ಯಕ್ರಮದ ಮತ್ತೋರ್ವ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ. ಸಿ.ಪಿ. ಮಧು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕೋವಿಡ್–19 ಎಂಬ ಸಾಂಕ್ರಾಮಿಕ ರೋಗದ ಕಾರಣದಿಂದ ಕೈ ನೈರ್ಮಲ್ಯದ ಬಗ್ಗೆ ಹೆಚ್ಚಿನ ಗಮನ ಹಾಗು ಕಾಳಜಿ ವಹಿಸುವಂತಹ ಪರಿಸ್ಥಿತಿ ಬಂದಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ವತಿಯಿಂದ ಜಾರಿಗೊಳಿಸಿರುವ ಕೈತೊಳೆಯುವ ಅಂಶಗಳನ್ನು ಎಲ್ಲರೂ ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಪಾಲಿಸುವುದರಿಂದ ಹಲವಾರು ರೋಗಗಳನ್ನು ತಡೆಗಟ್ಟಬಹುದು ಎಂದು ತಿಳಿಸಿದರು. ಡಾ. ಸುಮನಾರವರು ಕೈ ನೈರ್ಮಲ್ಯದ ದಿನದ ಬಗ್ಗೆ ಪದ್ಯವನ್ನು ಪ್ರಸ್ತುತಪಡಿಸಿದರು.

ದಿನಾಂಕ 4.5.2023ರಂದು ಪೋಸ್ಟರ್ ಪ್ರಸ್ತುತಿ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ತೃತೀಯ ವರ್ಷದ ವಿದ್ಯಾರ್ಥಿನಿಯರಾದ ಕು. ಟೆನ್ಜಿನ್ ಸುಮೊ, ಜುಲೇಕಾ ಪರ್ವಿನ್ ಹಾಗು ಸ್ವರ್ಣಾಲಿ ಸರ್ಕಾರ್, ದ್ವಿತೀಯ ಬಹುಮಾನವನ್ನು ಕು. ಡುಂಕಿ, ಕರ್ಮಲಾಂಜೆ, ಟೆನ್ಜಿನ್ ಚೋಸಿನ್, ಹರಿಣಿಕುಮಾರಿ, ಸಹನ ಪ್ರಸಾದ್, ಟೆನ್ಜಿನ್ ಸೆರಿನ್ ಗೊಯಿಬಾ ಪಡೆದುಕೊಂಡಿರುತ್ತಾರೆ. ನೈರ್ಮಲ್ಯದ ಬಗ್ಗೆ ದ್ವಿತೀಯ ವರ್ಷದ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಹೆಚ್‌ಐಸಿಸಿಯ ಅಧ್ಯಕ್ಷರಾದ ಡಾ. ಡಿ. ನಾರಾಯಣಪ್ಪ, ಕಾರ್ಯದರ್ಶಿಗಳಾದ ಡಾ. ರಶ್ಮಿ ಪಿ. ಮಹಾಲೆ, ಕಣ್ಗಾವಲು ಅಧಿಕಾರಿಗಳಾದ ಡಾ. ಕೆ.ಬಿ. ಚೇತಕ್, ಸಹಾಯಕ ಕಣ್ಗಾವಲು ಅಧಿಕಾರಿಯಾದ ಡಾ. ದೀಪಶ್ರೀ, ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎಂ.ಕೆ. ಅಶ್ವತಿದೇವಿ ಹಾಗು ನರ್ಸಿಂಗ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿ ಹಾಗು ಪ್ರಥಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಜಿ–20: ಜಾಗೃತಿ ಕಾರ್ಯಕ್ರಮ




ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ ಮೈಸೂರು ವತಿಯಿಂದ ಜಿ–20 ಎಂಬ ವಿಷಯದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ದಿನಾಂಕ 6.5.2023 ಮತ್ತು 8.5.2023ರಂದು ರಸಪ್ರಶ್ನೆ ಹಾಗು ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿರವರು ಜಿ–20 ಆಯೋಜನೆಯ ಧ್ಯೇಯ ಉದ್ದೇಶಗಳನ್ನು ಹಾಗು ಇದರ ಅಂಗವಾಗಿ ಆಯೋಜಿಸಲಾಗುವ ಕಾರ್ಯಾಗಾರಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

ರಸಪ್ರಶ್ನೆ ಕಾರ್ಯಕ್ರಮದಲ್ಲಿ ತೃತೀಯ ವರ್ಷದ ವಿದ್ಯಾರ್ಥಿಗಳಾದ ಕು. ಸ್ನೇಹ ಖಾನ್, ಕು. ಕೆ.ಎಂ. ಪಲ್ಲವಿ ಮತ್ತು ಕು. ಸ್ನೇಹ ರಾಜ್‌ರವರು ಮೊದಲ ಬಹುಮಾನವನ್ನು, ದ್ವಿತೀಯ ಬಹುಮಾನವನ್ನು ಪ್ರಥಮ ವರ್ಷದ ವಿದ್ಯಾರ್ಥಿಗಳಾದ ಕು. ಶೀತಲ್, ಕು. ಟೆನ್ಸಿನ್ ಯುಗೇನ್ ಮತ್ತು ಶ್ರೀ ಪಿ. ಪವನ್, ತೃತೀಯ ಬಹುಮಾನವನ್ನು ದ್ವಿತೀಯ ವರ್ಷದ ವಿದ್ಯಾರ್ಥಿಗಳಾದ ಕು. ಪಿ. ಲಲನ, ಕು. ಹರಿಣಿಕುಮಾರಿ ಹಾಗು ಶ್ರೀ ಕಿರಣ್ ಕುಮಾರ್ ಪಡೆದುಕೊಂಡಿರುತ್ತಾರೆ. ಪ್ರಬಂಧ ಸ್ಪರ್ಧೆಯಲ್ಲಿ ಮೊದಲನೇ ಬಹುಮಾನವನ್ನು ದ್ವಿತೀಯ ವರ್ಷದ ವಿದ್ಯಾರ್ಥಿನಿಯಾದ ಕು. ಟೆನ್ಸಿನ್ ಪಾಲ್ಡನ್, ದ್ವಿತೀಯ ಬಹುಮಾನವನ್ನು ತೃತೀಯ ವರ್ಷದ ವಿದ್ಯಾರ್ಥಿನಿಯಾದ ಕು. ಹೆಲೆನ್ ಮೇರಿ ಹಾಗು ತೃತೀಯ ಬಹುಮಾನವನ್ನು ಪ್ರಥಮ ವರ್ಷದ ವಿದ್ಯಾರ್ಥಿನಿಯಾದ ಕು. ಟೆನ್ಸಿನ್ ನವಾಂಗ್ ಪಡೆದುಕೊಂಡಿರುತ್ತಾರೆ. ಪ್ರಬಂಧ ಸ್ಪರ್ಧೆಯನ್ನು ಶಾಲೆಯ ನರ್ಸಿಂಗ್ ಟ್ಯೂಟರ್‌ಗಳಾದ ಶ್ರೀಮತಿ ಹೆಚ್.ಎಸ್. ಮಾನಸ ಹಾಗು ರಸಪ್ರಶ್ನೆ ಕಾರ್ಯಕ್ರಮವನ್ನು ಶ್ರೀಮತಿ ಎಸ್. ನೀತಾಡಳ್ವಿ ನಡೆಸಿಕೊಟ್ಟರು.

> ಅಮೃತಸಾಗರದೊಳಗಿರ್ದು ಆಕಳ ಚಿಂತೆಯೇಕೆ
> ಮೇರುಮಂದಿರದೊಳಗಿರ್ದು ಜರಗ ತೊಳೆವ ಚಿಂತೆಯೇಕೆ
> ಶ್ರೀ ಗುರುವಿನೊಳಗಿರ್ದು ತತ್ತ್ವವಿದ್ಯೆಯ ಚಿಂತೆಯೇಕೆ
> ಪ್ರಸಾದದೊಳಗಿರ್ದು ಮುಕ್ತಿಯ ಚಿಂತೆಯೇಕೆ
> ಕರಸ್ಥಲದೊಳಗೆ ಲಿಂಗವಿರ್ದು ಬಳಿಕ
> ಇನ್ನಾವ ಚಿಂತೆಯೇಕೆ ಹೇಳಾ ಗುಹೇಶ್ವರಾ
>
> **ಅಲ್ಲಮಪ್ರಭು**

# ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ



ಕೊಳ್ಳೇಗಾಲದ ಜೆಎಸ್‌ಎಸ್ ನರ್ಸಿಂಗ್ ಶಾಲೆಯಲ್ಲಿ ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಕೊಳ್ಳೇಗಾಲದ ಜೆಎಸ್‌ಎಸ್ ನರ್ಸಿಂಗ್ ಶಾಲೆಯಲ್ಲಿ ದಿನಾಂಕ 12.5.2023ರಂದು ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯನ್ನು ಆಚರಿಸಲಾಯಿತು. ತಾಲ್ಲೂಕು ಆಸ್ಪತ್ರೆಯ ಚರ್ಮರೋಗ ತಜ್ಞರಾದ ಡಾ. ಕಾವ್ಯ ತಿಮ್ಮಯ್ಯರವರು ಮಾತನಾಡಿ ನರ್ಸಿಂಗ್ ಸೇವೆಯಲ್ಲಿ ಪ್ರಾಮಾಣಿಕತೆ, ತಾಳ್ಮೆ, ಸಹಾನುಭೂತಿ ತುಂಬಾ ಮುಖ್ಯವಾಗಿರುತ್ತದೆ. ಶುಶ್ರೂಷಕ ಹಾಗೂ ವೈದ್ಯಕೀಯ ವೃತ್ತಿಗಳು ಕೇವಲ ಹಣಸಂಪಾದನೆಗಾಗಿ ಇರುವಂತಹ ವೃತ್ತಿಯಲ್ಲ. ಆದಾಗಿ ಪ್ರತಿಯೊಬ್ಬ ಶುಶ್ರೂಷಕರು ತಮ್ಮ ಜವಾಬ್ದಾರಿಗಳನ್ನು ತಪ್ಪದೇ ನಿರ್ವಹಿಸಬೇಕು ಎಂದು ಹೇಳಿದರು.

ಶುಶ್ರೂಷಕ ಅಧೀಕ್ಷಕರಾದ ಶ್ರೀಮತಿ ಶಶಿಕಲಾರವರು ಮಾತನಾಡಿ ವಿದ್ಯಾರ್ಥಿಗಳು ಫ್ಲಾರೆನ್ಸ್ ನೈಟಿಂಗೇಲ್‌ರವರಂತೆ ಸೇವೆ ಮಾಡುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ದೀಪದಾರಿ ಮಹಿಳೆ ರೋಗಿಗಳ ಪಾಲಿಗೆ ಬೆಳಕಾದಂತೆ ನೀವು ಆಗಬೇಕು ಎಂದು ಆಶಿಸಿದರು.

ಉಪ ಪ್ರಾಂಶುಪಾಲರಾದ ಶ್ರೀಮತಿ ಟಿ. ರಂಗನಾಯಕಿ ಮಾತನಾಡಿ ವಿದ್ಯಾರ್ಥಿಗಳು ಸಮಯಪ್ರಜ್ಞೆ, ಶಿಸ್ತು ಹಾಗೂ ಕಲಿಕೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಕಲಿಕೆಯ ಜೊತೆಗೆ ರೋಗಿಗಳಿಗೆ ಹೇಗೆ ಚಿಕಿತ್ಸೆ ಕೊಡಬೇಕೆಂದು ತೀಕ್ಷ್ಣವಾಗಿ ಗಮನಿಸಿ ಖಾಯಿಲೆ ಗುಣಮುಖವಾಗುವಂತೆ ಆರೈಕೆ ಮಾಡಬೇಕು ಎಂದು ಹೇಳಿದರು.

ಪ್ರಭಾರ ಪ್ರಾಂಶುಪಾಲರಾದ ಶ್ರೀ ಹೇಮೇಶಮೂರ್ತಿ ರವರು ಮಾತನಾಡಿ ಫ್ಲಾರೆನ್ಸ್ ನೈಟಿಂಗೇಲ್‌ರವರ ಸೇವೆ ಅನನ್ಯವಾದದ್ದು. ಅವರು ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ ಕೂಡ ಜನಸಾಮಾನ್ಯರ ಸೇವೆ ಮಾಡುವುದರಲ್ಲಿ ಸಾರ್ಥಕತೆಯನ್ನು ಪಡೆದುಕೊಂಡರು. ಆಧುನಿಕ ನರ್ಸಿಂಗ್ ಯುಗಕ್ಕೆ ನಾಂದಿ ಹಾಡಿದರು. ಇವರು ನಿಜಕ್ಕೂ ದೀಪದಂತೆ ಬೆಳಕಾದ ದೀಪದಾರಿ ಮಹಿಳೆಯೆಂದು ಬಣ್ಣಿಸಿದರು.

## ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯದ ಅರಿವು ಅವಶ್ಯಕ



ಮೈಸೂರಿನ ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ರೆಡ್‌ಕ್ರಾಸ್ ಘಟಕ ಮತ್ತು ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ 'ಮಾನಸಿಕ ಆರೋಗ್ಯದ ಅರಿವು' ಎಂಬ ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪ್ರೇರಣಾ ಆಸ್ಪತ್ರೆಯ ಕ್ಲಿನಿಕಲ್ ಸೈಕಾಲಜಿಸ್ಟ್ ಡಾ. ನೇಹಾ ದೇಚಮ್ಮರವರು ಮಾತನಾಡಿ ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯದ ಅರಿವು ಮೂಡಿಸುವುದು ಅತ್ಯವಶ್ಯಕ. ಮಾನಸಿಕ ಖಿನ್ನತೆಗೆ ಒಳಗಾದ ವಿದ್ಯಾರ್ಥಿಗಳು ಸಮಾಜದಲ್ಲಿ ಹಲವು ಸಮಸ್ಯೆಗಳಿಗೆ ಒಳಗಾಗ ಬೇಕಾಗುತ್ತದೆ ಎಂದು ತಿಳಿಸಿದರು.

ಸಿಇಒ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಮುಸ್ತಫ ಶರೀಫ್ ವಿದ್ಯಾರ್ಥಿಗಳು ತಮಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಆಪ್ತರಲ್ಲಿ ಚರ್ಚಿಸಬೇಕೆಂದು ಹೇಳಿದರು. ಕಾರ್ಯಕ್ರಮದಲ್ಲಿ ಶ್ರೀ ರಂಜನ್, ಶ್ರೀಮತಿ ಶಾಂತಿ ಮನುಪ್ರಸಾದ್, ಶ್ರೀಮತಿ ಯಶಸ್ವಿನಿ, ರೆಡ್ ಕ್ರಾಸ್ ಘಟಕದ ಕಾರ್ಯಕ್ರಮ ಅಧಿಕಾರಿಗಳಾದ ಶ್ರೀ ನಿರಂಜನ್ ಮೂರ್ತಿ, ಎಂ. ಶ್ರುತಿ, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಶ್ರೀ ಕೆ.ಬಿ. ಚಂದ್ರಶೇಖರ ಮೂರ್ತಿ, ಎಸ್. ಶ್ರುತಿ ಮತ್ತು ಪಾಲಿಟೆಕ್ನಿಕ್ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. □


## ಮಾರಿಷಸ್ ಜೆಎಸ್‌ಎಸ್ ಅಕ್ಯಾಡೆಮಿಗೆ ಉಪ ಪ್ರಧಾನಿಗಳ ಭೇಟಿ

ಮಾರಿಷಸ್‌ನಲ್ಲಿರುವ ಜೆಎಸ್‌ಎಸ್ ಅಕ್ಯಾಡೆಮಿಗೆ ದಿನಾಂಕ 2.5.2023ರಂದು ಮಾರಿಷಸ್‌ನ ಉಪ ಪ್ರಧಾನಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರಾದ ಶ್ರೀಮತಿ ಲೀಲಾದೇವಿ ದೂಖಿನ್ ಲುಚೂಮುನ್‌ರವರು ಭೇಟಿ ನೀಡಿ, ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದರ್ಶನಾಶೀರ್ವಾದ ಪಡೆದು, ಸಂಸ್ಥೆಯ ಕಾರ್ಯ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

